ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 32 ಆಗಸ್ಟ್ 10, 1986 ಬೆಲೆ 80 ಪೈಸೆ.

ಒಳಗೇನಿದೆ?....

ಮಂತ್ರಿ ವಿ. ಎಲ್. ಪಾಟೀಲರು ಮಂತ್ರಿ ಮಂಡಲದಲ್ಲಿ ಉಳಿಯಲು ಸಾಧ್ಯವೆ?

ಸುಮಾರು ಎರಡು ತಿಂಗಳುಗಳ ಹಿಂದೆ ನಾವು ಕಾಂಗ್ರೆಸ್ (ಐ) ಮುಖಂಡರಾದ ಬಂಗಾರಪ್ಪನವರ "ಭೂ-ಗ್ರಹಣ"ದ ಬಗ್ಗೆ ಗೇಣಿದಾರ ಒಕ್ಕಲುಗಳಿಗೆ ಬಗೆದ ದ್ರೋಹದ ಕುರಿತು (ಕರ್ನಾಟಕ ಹೈಕೋರ್ಟಿನ ತೀರ್ಪಿನ ಹಿನ್ನೆಲೆಯಲ್ಲಿ) ಬರೆದಿದ್ದೆವು. ಇಂತಹ ಮಹನೀಯರು ಹೇಗೆ ತಾನೆ ಭೂಸುಧಾರಣೆಯನ್ನು ಜಾರಿ ಮಾಡಿಯಾರು, ರೈತರಹಿತ ದೃಷ್ಟಿಯಿಂದಎಂದು ಪ್ರಶ್ನಿಸಿದ್ದೆವು. ಇದೀಗ ಜನತಾ ಪಕ್ಷದ ಮುಖಂಡರಾದ ಅದರಲ್ಲೂ ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಹೆಗ್ಡೆಯವರ ಮಂತ್ರಿಮಂಡಳದ ಕ್ಯಾಬಿನೆಟ್ ಮಂತ್ರಿಯಾದ ವಿ. ಎಲ್. ಪಾಟೀಲರ ಕುರಿತು ಅದೇಟೀಕೆ ಮಾಡುವ ಸಂದರ್ಭಬಂದಿದೆ. ಜಸ್ಟೀಸ್ ಪಿ. ಪಿ. ಬೋಪಣ್ಣನವರ ಕರ್ನಾಟಕ ಹೈಕೋರ್ಟಿನ ತೀರ್ಪೊಂದು ಈ ಸಂದರ್ಭವನ್ನೊದಗಿಸಿದೆ.

ಸಂಗತಿ ಹೀಗಿದೆ : ಬೆಳಗಾಂ ಜಿಲ್ಲೆಯ ರಾಯಬಾಗ್ ಭೂ–ನ್ಯಾಯ ಮಂಡಳಿಯು ಮಂತ್ರಿ ವಿ. ಎಲ್. ಪಾಟೇಲರಿಗೆ ಅನುಕೂಲಕರವಾಗಿಅವರ ಒಕ್ಕಲುಗಳಾದ ಅರ್ಜುನ್ ಹಾಲಪ್ಪ ನ್ಯಾಕ್ ಮತ್ತು ಆರು ಇತರರ ವಿರುದ್ಧ ತೀರ್ಪು ಕೊಟ್ಟಿತ್ತು. ಒಕ್ಕಲುಗಳು ಕರ್ನಾಟಕ ಹೈಕೋರ್ಟಿಗೆ ಈ ತೀರ್ಪಿನ ವಿರುದ್ಧ ಅರ್ಜಿಸಲ್ಲಿಸಿದ್ದು, ಅದು ಜಸ್ಟೀಸ್ ಪಿ. ಪಿ. ಬೋಪಣ್ಣನವರ ಕೋರ್ಟಿನಲ್ಲಿ ತೀರ್ಪಿಗೆ ಕಾದಿತ್ತು. ಇದೇ ಜುಲೈ 24 ರಂದು ಪಿ. ಪಿ. ಬೋಪಣ್ಣನವರು ವಿ.ಎಲ್. ಪಾಟೇಲರ ವಿರುದ್ಧ ತಮ್ಮ ತೀರ್ಪನ್ನು ಕೊಟ್ಟು "ಎರಡು ತಿಂಗಳುಗಳ ಒಳಗೆ ವಿವಾದಕ್ಕೊಳಗಾದ ಭೂಮಿಯನ್ನು ಅರ್ಜುನ್ ಹಾಲಪ್ಪ ನ್ಯಾಕರಿಗೂ ಇತರರಿಗೂ ಸ್ವಾಧೀನ ಹಕ್ಕು ಕೊಡಲು" ಬದ್ಧ ಎಂದು ಸಾರಿದ್ದಾರೆ.

ತೀರ್ಪಿನಲ್ಲಿ ಜಸ್ಟೀಸ್ ಬೋಪಣ್ಣನವರು ಈ ರೀತಿ ಮಂತ್ರಿಗಳನ್ನು ಟೀಕಿಸಿ ಭೂ–ನ್ಯಾಯ ಮಂಡಳಿಯ ಮೇಲೆ ಅಪಾದನೆ ಮಾಡಿದ್ದಾರೆ : ಪ್ರತಿವಾದಿ ಶ್ರೀ ಪಾಟೇಲರು ತಮ್ಮ ಮಂತ್ರಿ

(8ನೇ ಪುಟ ನೋಡಿ)

> ಜನತಾ ಪಕ್ಷದಲ್ಲಿರುವ ಅತಿ ದೊಡ್ಡ ಭೂಮಾಲೀಕರಲ್ಲೊಬ್ಬರಾದ ವಿ. ಎಲ್. ಪಾಟೀಲರ ಬೇನಾಮಿ ಭೂ ವ್ಯವಹಾರದ ಬಗ್ಗೆ ಸಾವಿರದ ಐನೂರು ಎಕರೆಗೂ ಹೆಚ್ಚಿನ ಭೂಮಿಯನ್ನು ಪಡೆದಿರುವ ಬಗ್ಗೆ ವಿಧಾನ ಸಭೆಯಲ್ಲಿ ಚರ್ಚೆಗೆ ಬಂದಿದೆ. ಇದೀಗ ಹೈಕೋರ್ಟಿನ ತೀರ್ಪು ಇವರ ಭೂಮಾಲೀಕತನ ಎಲ್ಲಾ ಕಟ್ಟು ಕಟ್ಟಳೆಗಳನ್ನೂ ಮೀರಿದೆ. ಎಂದು ತೀರ್ಪು ನೀಡಿದೆ. ಇಂತಹ ವ್ಯಕ್ತಿ ಮಂತ್ರಿ ಮಂಡಳದಲ್ಲಿ ಉಳಿಯಲು ಸಾಧ್ಯವೆ ?

ಎರಡು ಅಂತರರಾಷ್ಟ್ರೀಯ ಶೃಂಗ ಸಭೆಗಳು

"ಬ್ರಿಟನ್ ಇನ್ನು ಕಾಮನ್‌ವೆಲ್ತ್ ನಾಯಕನಲ್ಲ"

ಬ್ರಿಟಿಷ್ ಕಾಮನ್‌ವೆಲ್ತ್ ಎಂಬುದು ಒಂದು ದೇಶ ಮತ್ತೊಂದು ದೇಶವನ್ನು ತನ್ನ ಬೂಟುಗಾಲಿನಡಿಯಲ್ಲಿ ತುಳಿಯುತ್ತಿದ್ದ ವಸಾಹತು ಶಾಹಿ ಯುಗದ ಅವಶೇಷ. ಈ ಅವಶೇಷವನ್ನು ತಲೆಯ ಮೇಲೆ ಹೊತ್ತು ಮೆರೆಸುತ್ತಿದ್ದಾರೆ ಗುಲಾಮಗಿರಿಯಲ್ಲಿ ನರಳಿದ ದೇಶಗಳ ಆಳುವ ಭೂಮಾಲಕ – ಬಂಡವಾಳಶಾಹಿ ವರ್ಗಗಳು. ನಮ್ಮ ದೇಶದಲ್ಲಿ 45–47 ರ ವರೆಗೆ ಭುಗಿಲೆದ್ದ ವಿಮೋಚನಾ ಚಳುವಳಿಯ ಬೇಗೆಯನ್ನು ಸಹಿಸಲಾರದೆ ಕಾಂಗ್ರೆಸ್ ಪಕ್ಷಕ್ಕೆ ಆಡಳಿತವನ್ನೊಪ್ಪಿಸುವ ಶರಾತುರಿಯ ರಾಜೀ ಒಪ್ಪಂದದ ಒಂದು ಭಾಗವಾಗಿ ನಮ್ಮ ದೇಶದ ಹಿರಿ ಬಂಡವಾಳಶಾಹಿ ನಾಯಕತ್ವದ ಆಳುವ ವರ್ಗ ಯಾವುದೇ ನಾಚಿಕೆಯಿಲ್ಲದೆ ಗುಲಾಮಗಿರಿಯ ಕುರುಹಾದ ಈ ಸಂಸ್ಥೆಯಲ್ಲಿ, ಬ್ರಿಟಿಷ್ ತನ್ನ ಹಿಂದಿನ ಯಜಮಾನಿಕೆಯನ್ನು ಮುಂದುವರಿಸುವ ಯತ್ನದ ಈ ಸಂಸ್ಥೆಯಲ್ಲಿರಲು ಒಪ್ಪಿದರು.

ಈ ಕಾಮನ್‌ವೆಲ್ತ್‌ನಲ್ಲಿ ಸದಸ್ಯ ರಾಷ್ಟ್ರಗಳ ಬಹು ಮತಾಭಿಪ್ರಾಯಕ್ಕೆ ಬೆಲೆ ನೀಡುವುದಿಲ್ಲವೆಂಬುದನ್ನು, ಈ ಸಂಸ್ಥೆ ಇರುವುದೇ ನನ್ನ ಅಭಿಪ್ರಾಯಕ್ಕೆ ನೀವು ಮಣಿಯುವಂತೆ ಮಾಡುವುದಕ್ಕೆ ಹೊರತು ನಿಮ್ಮ ಬಹುಮತಾಭಿಪ್ರಾಯವನ್ನು ನಾನು ಮನ್ನಿಸುವುದಕ್ಕಲ್ಲ ಎಂದು ಬ್ರಿಟನ್ ಸಾರಿ ಹೇಳಿದಂತಾಗಿದೆ. ದಿನಾಂಕ ನಾಲ್ಕು, ಐದರಂದು ಲಂಡನ್‌ನಲ್ಲಿ ಸೇರಿದ್ದ ಏಳು ರಾಷ್ಟ್ರಗಳ- ಭಾರತ, ಜಾಂಬಿಯಾ, ಜಿಂಬಾಂಬ್ವೆ, ಕೆನಡಾ, ಆಸ್ಟ್ರೇಲಿಯಾ, ಬ್ರಿಟನ್, ದೇಶಗಳ ಶೃಂಗ ಸಭೆಯಲ್ಲಿ ಉಳಿದೆಲ್ಲಾ ಆರು ರಾಷ್ಟ್ರಗಳು ದ. ಆಫ್ರಿಕಾದ ಮೇಲೆ ಆರ್ಥಿಕ ದಿಗ್ಬಂಧನವನ್ನು ಹೇರಿ

(8ನೇ ಪುಟ ನೋಡಿ)

"ಎಲ್ಲಾ ಅಣು ಬಾಂಬ್ ಪರೀಕ್ಷೆಗಳನ್ನು ನಿಲ್ಲಿಸಿ"

"ಅಂತರಿಕ್ಷ ಇಡೀ ಮಾನವ ಸಮಾಜಕ್ಕೆ ಸೇರಿದ್ದು"

"ಜಿನೇವಾ ಒಪ್ಪಂದದ ವಾತಾವರಣ ಮರಳಿ ಮೂಡಿ ಬರಲಿ, ಸೋವಿಯತ್ ಒಕ್ಕೂಟ ಮತ್ತು ಅಮೇರಿಕಾ ಸಂಯುಕ್ತ ಸಂಸ್ಥಾನಗಳ ನಾಯಕರು ಶೀಘ್ರವೇ ಸೇರಿ ಮಾತುಕತೆ ನಡೆಸಲಿ, ಈ ಮಾತು ಕತೆಯಿಂದ ಪ್ರಯೋಜನ ಕಾರಿಯಾದ ಫಲಿತಾಂಶ ಬರಬೇಕು" ಎಂಬ ಮಾತುಗಳು ಕೇಳಿ ಬಂದದ್ದು ಜಗತ್ತಿನ ಐದು ಖಂಡಗಳ ಜನತೆಯ ಏಷ್ಯಾ, ಆಫ್ರಿಕ, ದ.ಅಮೇರಿಕ, ಉ. ಅಮೇರಿಕ ಯುರೋಪುಗಳ ಶಾಂತಿಪ್ರಿಯ ಜನತೆಯ ಮುಖವಾಣಿಗಳಾಗಿ ಮೆಕ್ಸಿಕೋ ದೇಶದ ಇಕ್ಸ್‌ಟಾಪಾದಲ್ಲಿ ಸೇರಿದ್ದ ಆರು ರಾಷ್ಟ್ರಗಳ ಪ್ರಮುಖರ ಸಭೆಯಲ್ಲಿ. ಭಾರತ, ಟಾಂಜಾನಿಯ, ಮೆಕ್ಸಿಕೊ, ಅರ್ಜಂಟೈನಾ, ಸ್ವೀಡನ್, ಗ್ರೀಸ್ ದೇಶಗಳ ಪ್ರಮುಖರ ಶೃಂಗ ಸಭೆಯ ಕರೆ ಇದು. ಹಿರೋಷಿಮಾದ ಮೇಲೆ ಬಿದ್ದ ಮೊದಲ ಅಣು ಬಾಂಬ್ ಎರಡು ಲಕ್ಷ ಜನರನ್ನು ಮೀರಿ ಬಲಿ ತೆಗೆದುಕೊಂಡ 41 ನೇ ವಾರ್ಷಿಕ ದಿನದಂದು ನೀಡಿದ ಕರೆ ಇದು

ದೆಹಲಿ ಘೋಷಣೆ ಎಂದು ಹೆಸರಾದ ಜನವರಿ 85ರಲ್ಲಿ ಇದೇ ಆರು ರಾಷ್ಟ್ರಗಳ ಪ್ರಮುಖರು ದೆಹಲಿಯಲ್ಲಿ ಸೇರಿ ಕೊಟ್ಟ ಕರೆಯ ಮುಂದುವರಿಕೆ ಇದು. ಈ ಕರೆಯನ್ನು ಸೋವಿಯತ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷದ ಪ್ರ[illegible]ನ ಕಾರ್ಯದರ್ಶಿ ಗೊರ್ಬಾಚೆವ್‌ರ[illegible], ಅಮೇರಿಕಾದ ಅಧ್ಯಕ್ಷ ರೀಗನ್‌ರವರಿಗೆ ಕಳುಹಿಸಿಕೊಟ್ಟರೆ ಗೊರ್ಬಾಚೆವ್‌ರವರಿಂದ ಈ ಕರೆಯನ್ನು ಸ್ವಾಗತಿಸಿ, ಈ ಕರೆಗೆ ಓಗೊಟ್ಟು ಅಣು ಶಸ್ತ್ರಗಳ ಪರೀಕ್ಷೆಯನ್ನು ಪೂರ್ತಿಯಾಗಿ ನಿಲ್ಲಿಸಿತ್ತು. ಆದರೆ ಜಗತ್ತಿನ ಸಾಮ್ರಾಜ್ಯಶಾಹಿಗಳ ಪೀಡಕರ ನಾಯಕ ರೀಗನ್‌ರವರು ಈ ಕಾಗದಗಳಿಗೆ, ಕರೆಗೆ ಉತ್ತರ ನೀಡುವ ಗೋಜಿಗೆ ಹೋಗಲಿಲ್ಲ. ಮಾತ್ರವಲ್ಲ ತಮ್ಮ ದೇಶದ ನೆವಾಡ ಮರುಭೂಮಿಯಲ್ಲಿ ಅಣುಬಾಂಬ್‌ಗಳ ಪರೀಕ್ಷೆಯನ್ನು ಬಿರುಸಿನಿಂದ ಮುಂದುವರೆಸಿದರು.

> "ರೀಗನರೇ, ನಿಶ್ಶಸ್ತ್ರೀಕರಣದ ಬಗ್ಗೆ ಒಂದು ಐತಿಹಾಸಿಕ ಮಹತ್ವದ ಒಪ್ಪಂದ ಮಾಡಲು ಇದು ನಿಮಗೆ ಕೊನೆಯ ಅವಕಾಶ ಈ ಅವಕಾಶವನ್ನು ಉಪಯೋಗಿಸಿ"
>
> – ಸ್ವೀಡನ್ ಪ್ರಧಾನಿ

ಈಗಲೂ ಕೂಡ ಸೋವಿಯತ್ ಒಕ್ಕೂಟ ಮತ್ತೆ ಮತ್ತೆ ಹೇಳುತ್ತಿರುವುದು ಇದನ್ನೇ. ಜಿನೇವಾ ಒಪ್ಪಂದದ ವಾತಾವರಣ ಮರಳಿ ಮೂಡುವಂತೆ ಮಾಡಬೇಕು. ನಾವು ಮತ್ತು ಅಮೇರಿಕಾ ಮತ್ತೆ ಸೇರಿ ಚರ್ಚೆ ಮಾಡಬೇಕು ನಿಜ, ಆದರೆ ಪರೀಕ್ಷೆ[illegible]

(8ನೇ ಪುಟ ನೋಡಿ)

ಕೇರಳದಲ್ಲಿ ಡಿ. ವೈ. ಎಫ್. ಐ ಹೋರಾಟ

ಗುಂಡು, ಲಾಠಿಚಾರ್ಜ್–300 ಮಂದಿ ಆಸ್ಪತ್ರೆಗೆ

ಉದ್ಯೋಗವಿನಿಮಯಕೇಂದ್ರಗಳಲ್ಲಿ ದಾಖಲು ಮಾಡಿದ ಕೂಡಲೇಕೆಲಸ ಕೊಡಿ ಇಲ್ಲವೇ ನಿರುದ್ಯೋಗ ಭತ್ಯೆ ಕೊಡಿಎಂದು ಒತ್ತಾಯಿಸಿ ಎಲ್ಲಿ ಮಂತ್ರಿಗಳಿದ್ದರೆ ಅಲ್ಲಿ ಅವರನ್ನು ಘೆರಾವ್ ಮಾಡುವ ಕಾರ್ಯಕ್ರಮವನ್ನು ಕೇರಳದ ಡಿ. ವೈ. ಎಫ್. ಐ ಹಮ್ಮಿಕೊಂಡಿದೆ ಈ ಕಾರ್ಯಕ್ರಮದಲ್ಲಿ ಒಂದನೇ ತಾರೀಖು ತಿರುವಂತನಪುರದಲ್ಲಿ ಮಂತ್ರಿಗಳ ಮನೆ ಹಾಗು ಕಛೇರಿಗಳಿಗೆ ಮೆರವಣಿಗೆ ಹೊರಟರು ಆ ದಿನ 2000 ಜನ ಯುವಕ ಯುವತಿಯರನ್ನು ಸರಕಾರ ಬಂಧಿಸಿತು. ಆಗಸ್ಟ್ 2 ರಂದು 5 ಜನ ಮಂತ್ರಿಗಳನ್ನು ಅವರು ಸಂಚರಿಸುತ್ತಿದ್ದ ಕಡೆಯಲ್ಲಿಯೇ – ಪರಾನಂದವಾಡಿಯಲ್ಲಿ ಕಂದಾಯ ಮಂತ್ರಿ, ಕಣ್ಣಾನೂರಿನಲ್ಲಿಕೈಗಾರಿಕಾಮಂತ್ರಿ, ಸಹಕಾರ ಸಚಿವೆಯವರನ್ನುಕ್ಯಾಲಿಕಟ್‌ನಲ್ಲಿ-ಮಲಪುರಂ ಜಿಲ್ಲೆಯಲ್ಲಿ ಆಹಾರ ಮಂತ್ರಿ. ಅರಣ್ಯಸಚಿವರನ್ನು-ತಡೆಯಲಾಯಿತು

ಕಣ್ಣಾನೂರಿನಲ್ಲಿ ಪೋಲಿಸರು ಗುಂಡುಹಾರಿಸಿ 2ಗಂಟೆಗಳಕಾಲ ಲಾಠಿ ಚಾರ್ಜ್ ಮಾಡಿದರು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿಯೂ ಲಾಠಿಚಾರ್ಜ್, ಅಶ್ರುವಾಯು ಪ್ರಯೋಗ ಮಾಡಲಾಯಿತು ಕಣ್ಣಾನೂರಿನಲ್ಲಿಯೇ 300 ಜನರನ್ನು ಆಸ್ಪತ್ರೆಗೆ ಸೇರಿಸಬೇಕಾಯಿತು ಹೀಗೆ ಕೆಲಸ ಕೇಳಿದ ಜನರ ಮೇಲೆ ತನ್ನ ಶೌರ್ಯವನ್ನು ಕೇರಳದ ಕಾಂಗ್ರೆ ನೇತೃತ್ವದ ಸಂಯುಕ್ತರಂಗ ಸರಕಾರ ಗುಂಡುಲಾಠಿಗಳಮೂಲಕ ಪ್ರದರ್ಶಿಸಿದೆ. ಈ ಹೋರಾಟಡಿ.ವೈ.ಎಫ್ ಐ.ನ ಕಾರ್ಯಕ್ರಮದ ಎರಡನೆಯ ಹಂತ. ಮೊದಲನೆಯು, ಹಂತ ದಿನಾಂಕ 25ರಂದ 31 ರವರೆಗೂಗ್ರಾಮಕಛೇರಿಗಳು ತಾಲ್ಲೂಕು ಕಛೇರಿಗಳಮೂಲಕ ನಡೆಸಿತು. ಈಕಾರ್ಯಕ್ರಮದ ಮೊದಲ ದಿನವೇ 4ಲಕ್ಷ ಜನ ಪಿಕೆಟಿಂಗ್‌ನಲ್ಲಿ ಭಾಗ ವಹಿಸಿದ್ದರು.

ಚಿಂತಾಮಣಿ ತಾಲ್ಲೂಕು ಪ್ರಾಂತ ರೈತ ಸಂಘದ ಸಮ್ಮೇಳನ

30-7-86 ರಂದು ಚಿಂತಾಮಣಿಯಲ್ಲಿ ವಾಸವೀ ಕಲ್ಯಾಣ ಮಂಟಪದಲ್ಲಿ ಚಿಂತಾಮಣಿ ತಾಲ್ಲೋಕ್ ರೈತ ಸಮ್ಮೇಳನ ನಡೆಯಿತು. ಡಾ|| ಎಂ. ವಿ. ರಾಮಚಂದ್ರಗೌಡ ಅವರು ಸ್ವಾಗತಿಸಿದರು. ಅಧ್ಯಕ್ಷ ಮಂಡಲಿಯನ್ನಾಗಿ ಕಾ. ಅಶ್ವತ್‌ನಾರಾಯಣರೆಡ್ಡಿ, ಶ್ರೀನಿವಾಸ್ ರೆಡ್ಡಿ ಮತ್ತು ಕೆ. ವಿ. ಸತ್ಯನಾರಾಯಣ ಅವರುಗಳನ್ನು ಸಮ್ಮೇಳನವು ಆಯ್ಕೆ ಮಾಡಿತು.

ತಾಲ್ಲೂಕ್ ಕಾರ್ಯದರ್ಶಿ ಕಾ ಎಸ್. ಸಿ. ದೊಡ್ಡಾರೆಡ್ಡಿ ಅವರು ಹಿಂದಿನ ಸಮ್ಮೇಳನದಿಂದ ನಡೆದಿರುವ ಚಟುವಟಿಕೆ, ಹೋರಾಟ, ಸದಸ್ಯತ್ವ ಹಾಗೂ ಸಂಘಟನೆಯ ಮುಂದಿನ ಚಟುವಟಿಕೆಗಳು ಮುಂತಾಗಿ ವರದಿ ಮಂಡಿಸಿದರು. ವರದಿಯನ್ನು ಬೆಂಬಲಿಸಿ ಅಶ್ವತನಾರಾಯಣ ರೆಡ್ಡಿ ಅವರು ಮಾತನಾಡಿದರು. ವರದಿಯ ಮೇಲಿನ ಚರ್ಚೆಯಲ್ಲಿ ಹದಿನೈದು ಸಂಗಾತಿ ಪ್ರತಿನಿಧಿಗಳು ಭಾಗವಹಿಸಿದ ನಂತರ ವರದಿಯನ್ನು ಸಮ್ಮೇಳನವು ಅಂಗೀಕರಿಸಿತು.

ಹದಿನೈದು ಜನ ತಾಲ್ಲೂಕ್ ಸಮಿತಿಯನ್ನು ಆರಿಸಲಾಯಿತು. ಕಾರ್ಯದರ್ಶಿಯಾಗಿ ಕಾ|ಎಸ್. ಸಿ. ದೊಡ್ಡಾರೆಡ್ಡಿ ಅಧ್ಯಕ್ಷರಾಗಿ ಕಾ. ರಾಮಚಂದ್ರೇಗೌಡ, ಇವರುಗಳನ್ನು ಆಯ್ಕೆ ಮಾಡಲಾಯಿತು. ○

ಡಿ. ವೈ. ಎಫ್. ಐ. ಕಚೇರಿಯ ಉದ್ಘಾಟನೆ

21-7-86ರಂದು ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಮೊರಟಗಿಗ್ರಾಮದಲ್ಲಿ ಕಾ|ಸಿದ್ಧಲಿಂಗಸ್ವಾಮಿ ಅವರಿಂದ ಡಿ ವೈ ಎಫ್.ಐ. ಕಛೇರಿಯು ಉದ್ಘಾಟಿಸಲ್ಪಟ್ಟಿತು. ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷರಾದ ಕಾ| ಭೀಮಶಿ ಕಲಾದಗಿ ಅವರು ಧ್ವಜಾರೋಹಣ ಮಾಡಿದರು. ಕಾ| ಶಂಕರಪ್ಪ ಅವರು ಅಧ್ಯಕ್ಷತೆ ವಹಿಸಿದ್ದರು. ಸಿದ್ದಣ್ಣ ಐಹೊಡಗಿ, ಶರಣಪ್ಪ ಇವರುಗಳು ಪ್ರಗತಿಪರ ಗೀತೆಗಳನ್ನು ಹಾಡಿದರು.

ಕಾ| ಮಹ್ಮದ್ ಸಲಿಮ ನೇತಾಜಿ ಯುವಕ ಮಂಡಲದ ಕಲಗೇರಿ ಪದ್ಮರಾಜ ರಕ್ಕಸಗಿ, ದಶರತ್, ಬಸವರಾಜು ಮತ್ತು ಅಣ್ಣಾರಾಯ ಇಳಗೇರ ಇವರು ಡಿ.ವೈ ಎಫ್ ಐ ಧ್ಯೇಯೋದ್ದೇಶಗಳ ವಿಷಯವಾಗಿ ಮಾತನಾಡಿದರು.

ಕಾ ಭೀಮಶಿಕಲಾದಗಿಯವರು ಮಾತನಾಡುತ್ತ ಸಂಘಟನೆಯು ನಿರುದ್ಯೋಗ ಅನಕ್ಷರತೆ, ರಾಷ್ಟ್ರೀಯ ಸಮಗ್ರತೆಗಳ ವಿಷಯವಾಗಿ ಸದಸ್ಯತ್ವದ ಆಧಾರದಲ್ಲಿ ಮತ್ತು ಸ್ಥಳೀಯ ಸಮಸ್ಯೆಗಳನ್ನೊಳಗೊಂಡು ಹೋರಾಟ ನಡೆಸಬೇಕೆಂದು ಕರೆ ನೀಡಿ ಪ್ರಾಂತ ರೈತ ಸಂಘವು ಸಂಪೂರ್ಣ ಬೆಂಬಲ ನೀಡುವುದೆಂದು ಹೇಳಿದರು.

ಮಹಾರಾಷ್ಟ್ರ ಬ್ಯಾಂಕಿನ ಮ್ಯಾನೇಜರ್ ಚಾಮರಾಜ, ಗ್ರಾಮ ರೈತ ಸಂಘದ ಕಾರ್ಯದರ್ಶಿ ಜೀವರಗಿ ಇವರುಗಳು ಮಾತನಾಡಿದರು. ಸಿದ್ದಣ್ಣ ನೇಮ ಶೆಟ್ಟಿಯವರು ವಂದನಾರ್ಪಣೆ ಮಾಡಿದರು.

ಡಿ ವೈ ಎಫ್ ಐ ಕೋಲಾರ ಜಿಲ್ಲಾ ಸಮಿತಿಯ ಸಭೆ

31-7-1980 ರಂದು ಚಿಂತಾಮಣಿಯಲ್ಲಿಡಿ.ವೈ.ಎಫ್.ಐ. ಕೋಲಾರ ಜಿಲ್ಲಾ ಸಮಿತಿಯ ಸಭೆ ನಡೆಯಿತು. ಸಭೆಯಲ್ಲಿ ಭಾಗವಹಿಸಿದ್ದ ರಾಜ್ಯ ಕಾರ್ಯದರ್ಶಿ ಎಸ್. ಶಿವರಾಂ ಅವರು ರಾಷ್ಟ್ರ ಎದುರಿಸುತ್ತಿರುವ ಸಮಸ್ಯೆ ಹಾಗೂ ಡಿ.ವೈ.ಎಫ್.ಐ ಕರ್ತವ್ಯದ ಬಗ್ಗೆ ವಿವರಿಸಿದರು.

ರಾಜ್ಯದ ಉಪಾಧ್ಯಕ್ಷ ಮತ್ತು ಜಿಲ್ಲಾ ಸಂಚಾಲಕ ಕಾ| ಕೆ. ವಿ. ಸತ್ಯನಾರಾಯಣ ಅವರು ರಾಜ್ಯ ಸಮಿತಿಯ ತೀರ್ಮಾನಗಳನ್ನು ವಿವರಿಸಿ ಸದಸ್ಯತ್ವವನ್ನು ತೀವ್ರತರವಾಗಿ ನೊಂದಾಯಿಸಬೇಕೆಂದು ಹೇಳಿದರು.

ಜಿಲ್ಲೆಯ ಆರೇಳು ಘಟಕಗಳು ಆಗಸ್ಟ್ 15 ರಂದು ಸ್ವಾತಂತ್ರ್ಯ ದಿನಾಚರಣೆಯ ದಿನ ರಾಷ್ಟ್ರೀಯ ಸಮಗ್ರತೆಯದಿನಾಚರಣೆಯನ್ನು ವಿಚಾರ ಸಂಕಿರಣಗಳ ಮೂಲಕಆಚರಿಸಬೇಕೆಂದೂ, ಆಗಸ್ಟ್ ಕೊನೆಯ ವಾರದಲ್ಲಿ ನಿರುದ್ಯೋಗಿಗಳಿಗೆ ಭತ್ಯೆಗಾಗಿ ಅವರನ್ನು ಸೇರಿಸಿಕೊಂಡು ವಿಚಾರ ಸಂಕಿರಣ ನಡೆಸಬೇಕೆಂದು ಹಾಗೂ ಸದಸ್ಯತ್ವವನ್ನು ನೊಂದಾಯಿಸಿ ಮುಗಿಸಬೇಕೆಂದು ಜಿಲ್ಲಾ ಸಮಿತಿಯು ತೀರ್ಮಾನಿಸಿತು.

ಕಾರ್ಮಿಕ ರಂಗದ ಕಾರ್ಯಕರ್ತ ಕಾಂ|| ಮದಾರ್ ನಿಧನ



ಹರಿಹರದ ಬಿಡೀ ಕಾರ್ಮಿಕರ ನಾಯಕರಾಗಿದ್ದ ಕಾಂ|| ಎಸ್. ಸಿ. ಮದಾರ್ 26-7-86ರ ಬೆಳಗ್ಗೆ 1-30ಕ್ಕೆ ಹೃದಯಾಘಾತದಿಂದ ನಿಧನರಾದರು. ಇವರ ಅಂತ್ಯಕ್ರಿಯೆ ತಾ|| 27 ರಂದು ಹರಿಹರದ ಕಾರ್ಮಿಕರು, ನಾಗರೀಕರು ಬಹು ಸಂಖ್ಯೆಯಲ್ಲಿ ನೆರೆದಿದ್ದರು.

ಕಾ| ಮದಾರ್‌ರವರಿಗೆ 4 ತಿಂಗಳ ಹಿಂದೆ ಮೊದಲು ಹೃದಯಾಘಾತವಾಗಿ ಪಾರ್ಶ್ವವಾಯು ಕೂಡ ಆಗಿತ್ತು. ಆದರೆ ಚೇತರಿಸಿಕೊಂಡ ಕೆಲವೇ ದಿನಗಳಲ್ಲಿ ಪಕ್ಷದ ಹಿತೈಷಿಗಳು ವಿಶ್ರಾಂತಿ ತೆಗೆದುಕೊಳ್ಳುವಂತೆ ಒತ್ತಾಯಿಸಿದರೂ ಬೀಡಿ ಕಾರ್ಮಿಕರ ಹೋರಾಟದಲ್ಲಿ ಧುಮುಕಿದರು. ಹುಬ್ಬಳ್ಳಿಗೆ ದಿನವೂ 100ಕಿ.ಮಿ ಗೂ ಹೆಚ್ಚು ಪ್ರಯಾಣ ಮಾಡಿ ಕೆಲಸ ಮಾಡುತ್ತಿದ್ದರು. ಈ ದುಡಿಮೆಯಲ್ಲಿಯೇ ಮತ್ತೆ ಹೃದಯಾಘಾತಕ್ಕೆ ಒಳಗಾಗಿ ನಿಧನರಾದರು,

ಕೇರಳದ ತಲಚ್ಚೇರಿ ಪ್ರದೇಶದಲ್ಲಿ ಜನಿಸಿದ ಮಾಧವನ್ ಎಂಬ ಇವರು ಸ್ವಾತಂತ್ರ್ಯ ಪೂರ್ವದಲ್ಲಿಯೇ ಮೈಸೂರಿಗೆ ಬಂದು ಬೀಡಿ ಕಾರ್ಮಿಕರ ಹೋರಾಟದಲ್ಲಿ ಪಾಲ್ಗೊಂಡರು. ಸಾಂಗ್ಲಿಯಲ್ಲಿ ಬೀಡಿ ಮಾಲೀಕರ ವಿರುದ್ಧ ಹೋರಾಟದಲ್ಲಿ ಕೆಲಸ ಕಳೆದುಕೊಂಡು ಹರಿಹರದಲ್ಲಿ ನೆಲಸಿದರು. ಸಾಂಗ್ಲಿಯಲ್ಲಿಯೇ ಬೀಡಿ ಕಾರ್ಮಿಕ, ಮುಸ್ಲಿಂ ಮಹಿಳೆಯನ್ನು ಮದುವೆಯಾಗಿ ಇಸ್ಲಾಂ ಧರ್ಮಕ್ಕೆ ಪರಿವರ್ತಿತವಾದರು. ಹರಿಹರದಲ್ಲಿ ಬೀಡಿ ಕಾರ್ಮಿಕರ ಮಧ್ಯ ಅಲ್ಲದೆ, ಫೈಬರ್ಸ್ ಕಾರ್ಮಿಕರ ನಡುವೆಯೂ ಕೆಲಸ ಮಾಡುತ್ತಿದ್ದರು. ○

ಬೆಂಗಳೂರಿನಲ್ಲಿ ಪೋಲಿಸ್ ದೌರ್ಜನ್ಯ ವಿರೋಧಿಸಿ ಮೌನ ಪ್ರದರ್ಶನ

ಜನತಾ ಸರಕಾರದಲ್ಲಿ ಇತ್ತೀಚೆಗೆ ಪೋಲೀಸರು ಕಾರ್ಮಿಕರ ಹೋರಾಟಗಳನ್ನು ಮುರಿಯಲು ಮಾಲೀಕರ ಪರವಾದ ಧೋರಣೆಗಳನ್ನು ಅನುಸರಿಸಿ ಕಾರ್ಮಿಕರ ಹೋರಾಟಗಳನ್ನು ಮುರಿಯಲು ಪ್ರಯತ್ನ ನಡೆಸಿದ್ದಾರೆ. ಲಾಕೌಟ್ ಮಾಡಿದ.ಯು ಬಿ. ಮಾಲೀಕರಿಗೆ ಬೆಂಬಲ ನೀಡಿ, ಕಾರ್ಮಿಕರು ಹಾಕಿದ್ದ ಟೆಂಟನ್ನು ಕಿತ್ತು ಹಾಕಿದ್ದಾರೆ. ಹಾಗೆಯೇ ಹೋಟೆಲ್ ಇಂಟರ್ ನ್ಯಾಶನಲ್ ಕಾರ್ಮಿಕರು ಧರಣಿ ಕೂತಿದ್ದ ಟೆಂಟನ್ನು ಕಿತ್ತು ಹಾಕಿ, ಕರಿಗಾಲುಗಳ ಪ್ರವೇಶಕ್ಕೆ ಅನುಕೂಲ ಮಾಡಿ ಕೊಟ್ಟಿದ್ದಾರೆ. ಕೃಷ್ಣಾ ಪ್ಲೋರ್ ಮಿಲ್, ರಾಜೀವ್ ಎಂಟರ್ ಪ್ರೈಸಸ್ ಗಳಲ್ಲೂ ಅದೇ ರೀತಿಮಾಡಿ, ಕಂಪನಿಯೊಳಗೆ ಕೆಲಸ ಮಾಡುತ್ತಿದ್ದ ಕಾರ್ಮಿಕರನ್ನು ಬಂಧಿಸಿದ್ದಾರೆ ಆಟೋರಿಕ್ಷಾ ಚಾಲಕರ ಮೇಲೂ ಕೇಸ್ ಹಾಕಿ ಕಿರುಕುಳ ಮಾಡುತ್ತಿದ್ದಾರೆ.

ನ್ಯಾಯಕ್ಕಾಗಿ ಹೋರಾಡುವ ಕಾರ್ಮಿಕರಿಗೆ ಬೆಂಬಲ ನೀಡದೆ ಮಾಲೀಕರ ಪರವಾದ ದೋರಣೆ ಅನುಸರಿಸಿ, ಕಾರ್ಮಿಕರಿಗೆ ಅನ್ಯಾಯ ಎಸಗುವ ಪೋಲೀಸ್ ನೀತಿಯನ್ನು ಖಂಡಿಸಲು 24-8-86 ರಂದು ಬೆಂಗಳೂರಿನಲ್ಲಿ ನೂರಾರು ಕಾರ್ಮಿಕರು ಮೈಸೂರು ಬ್ಯಾಂಕ್ ಸರ್ಕಲ್‌ನಿಂದ ಮೆರವಣಿಗೆಯಲ್ಲಿ ಪೋಲೀಸ್ ಕಮೀಶನರ್ ಕಛೇರಿ ಮುಂದೆ ಮೌನ ಪ್ರದರ್ಶನ ನಡೆಸಿದರು. ಒಂದು ಗಂಟೆಗೂ ಹೆಚ್ಚುಕಾಲ ಮೌನ ಪ್ರದರ್ಶನದ ನಂತರ ಪೋಲೀಸ್ ಅಧಿಕಾರಿಗಳು ಯೂನಿಯನ್ ಮುಖಂಡರನ್ನು ಕರೆಸಿ ಚರ್ಚಿಸಿ ಸಮಸ್ಯೆ ಬಗೆಹರಿಸಲು ಪ್ರಯತ್ನ ಮಾಡುವುದಾಗಿ ಆಶ್ವಾಸನೆ ನೀಡಿದರು. ಟಿ. ಎಸ್. ಅನಂತರಾವ್, ಶ್ರೀನಿವಾಸ, ಕೆ.ಎಸ್. ಸುಬ್ರಮಣ್ಯ, ವಿ. ರಮೇಶ್, ಜಾನ್ ವಿನ್‌ಸೆಂಟ್ ಮೊದಲಾದವರು ಮೌನ ಪ್ರದರ್ಶನದ ಮುಖಂಡತ್ವ ವಹಿಸಿದ್ದರು.

ಹತ್ತು ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಧರಣಿ ಸತ್ಯಾಗ್ರಹ

ಆಗಸ್ಟ್ ಒಂದರಂದು ರಾಜ್ಯದ ಎಲ್ಲಾ ಜಿಲ್ಲಾ ಕಛೇರಿಗಳ ಮುಂದೆ ರೈತರಧ್ವನಿ. (ಮಂಗಳೂರು ಜಿಲ್ಲೆಯಲ್ಲಿ ಏಳು ತಾಲ್ಲೂಕು ಕಛೇರಿಗಳ ಮುಂದೆ ಕೂಡ) ಕೆಲವು ಜಿಲ್ಲೆಗಳಲ್ಲಿ ಜಾತಾ, ಸೈಕಲ್ ಜಾತಾಗಳ ಮೂಲಕ ಗ್ರಾಮ ಗ್ರಾಮಗಳನ್ನು ಹಾಯ್ದು ಬಂದ ರೈತ ಸಮುದಾಯ. ಎಲ್ಲರ ಬಾಯಲ್ಲಿಯೂ ಒಂದೇ ಮಾತು ! ಕರ್ನಾಟಕದ ಸಮಸ್ತ ರೈತ-ಕೃಷಿಕಾರ್ಮಿಕರಿಗೆ ಸಂಬಂಧಿಸಿದ ಹತ್ತು ಸಮಗ್ರ ಒತ್ತಾಯಗಳನ್ನು ಈಡೇರಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮ್ಮೇಳನ ಮೊಳಗಿಸಿದ ಕರೆಯ ಅಂಗವಾಗಿ ನಡೆದ ಕಾರ್ಯಕ್ರಮದ ಮೊದಲ ಹಂತ ಜಿಲ್ಲಾ ಕಛೇರಿಗಳ ಮುಂದೆ ಆಗಸ್ಟ್ ಒಂದರಂದು ಧರಣಿ ಸತ್ಯಾಗ್ರಹ.

ಮೂರು ವರ್ಷಗಳ ಕಾಲ ತೀವ್ರ ಬರಗಾಲಕ್ಕೆ ತುತ್ತಾದುದಲ್ಲದೆ ಮತ್ತೆ ನಾಲ್ಕನೆಯ ವರ್ಷ ನಿರಂತರ ಬರಗಾಲವಾಗಬಹುದೆಂಬ ಭಯ ಆತಂಕಗಳು ರೈತರನ್ನು ಕಾಡುತ್ತಿವೆ. ಆದುದರಿಂದ ಮಳೆ ಸರಿಯಾಗಿ ಬರದ ಎಲ್ಲಾ ಕಡೆ ಕೂಡಲೇ ಬರ ಪರಿಸ್ಥಿತಿಯನ್ನೆದುರಿಸಲು ಸರಕಾರ ಸನ್ನದ್ಧವಾಗಬೇಕು. ಬರಗಾಲ ಪರಿಹಾರ ಕಾಮಗಾರಿಗಳನ್ನು ಕೂಡಲೇ ಆರಂಭಿಸಬೇಕು. ಇದರಲ್ಲಿ ಎಲ್ಲಾ ಭ್ರಷ್ಟಾಚಾರವನ್ನು ತೊಡೆಯಬೇಕು.

ಬರಗಾಲವನ್ನು ಶಾಶ್ವತವಾಗಿ ತೊಡೆಯಲು ನೀರಾವರಿಯನ್ನೊದಗಿಸುವುದೇ ಮದ್ದು. ರಾಜಸ್ಥಾನ ಬಿಟ್ಟರೆ ಕರ್ನಾಟಕವೇ ಅತ್ಯಂತ ಕಡಿಮೆ ನೀರಾವರಿಯುಳ್ಳ ಪ್ರದೇಶ. ಕರ್ನಾಟಕದ ಎಲ್ಲ ನೀರಾವರಿ ಸಂಪನ್ಮೂಲಗಳನ್ನು ತ್ವರಿತ ಗತಿಯಲ್ಲಿ ಬಳಸುವ ಕ್ರಮ ಕೈಗೊಳ್ಳಬೇಕು.

ಭೂಸುಧಾರಣಾ ಕಾರ್ಯ ಪೂರ್ಣವಾಗಿ ಸ್ಥಗಿತವಾಗಿದೆ. ಭೂಸುಧಾರಣಾ ಕಾನೂನಿನ ಸಂದಿಗೊಂದಿಗಳನ್ನೆಲ್ಲ ಮುಚ್ಚುವಂತೆ ತೀವ್ರ ರೀತಿಯ ತಿದ್ದುಪಡಿ ತಂದು ಹೆಚ್ಚು ಭೂಮಿಯನ್ನು ಪಡೆದು ಭೂಹೀನರಿಗೆ, ಸಣ್ಣ ರೈತರಿಗೆ ನೀಡಬೇಕು.

ಹತ್ತಾರು ವರ್ಷಗಳಿಂದ ಸರಕಾರಿ ಬಂಜರು ಭೂಮಿಯನ್ನು ಬೇಸಾಯ ಮಾಡುತ್ತಿರುವ ದರಖಾಸ್ತುದಾರರಿಗೆ ಅಗಮೇದಾರರಿಗೆ ಕೂಡಲೇ ಭೂಮಿಯ ಹಕ್ಕು ಪತ್ರನೀಡಬೇಕು.

ಅಗ್ಗದ ಬಡ್ಡಿಯಲ್ಲಿ ಕೃಷಿಸಾಲ, ಕೃಷಿ ಕಾರ್ಮಿಕರಿಗೆ ಕನಿಷ್ಠ ಕೂಲಿ, ಕೃಷಿಕರ ಫಸಲಿಗೆ ಲಾಭದಾಯಕ ಬೆಂಬಲ ಬೆಲೆ, ಮನೆಯಿಲ್ಲದ ಬಡವರಿಗೆ ನಿವೇಶನ ಮತ್ತು ಮನೆ, ಹಸಿರು ಕಾರ್ಡು ಹಂಚಿಕೆ, ಬೀಜ, ಕ್ರಿಮಿನಾಶಕಗಳನ್ನು ಕಡಿಮೆ ಬೆಲೆಗೆ ನೀಡುವುದು, ನೀರಾವರಿ ಯೋಜನೆಗಳಲ್ಲಿ ನೀರು ಹಂಚಿಕೆಯ ಸಮಸ್ಯೆಗಳು ಇವೇ ಮುಂತಾದ ಬೇಡಿಕೆಗಳಿಗಾಗಿ ರಾಜ್ಯಾದ್ಯಂತ ನಡೆದ ಧರಣಿ ಸತ್ಯಾಗ್ರಹದ ವರದಿ ಇಲ್ಲಿದೆ.

ದ. ಕ. ಜಿಲ್ಲೆ

ದ. ಕ. ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿಯೂ ತಹಸಿಲ್ದಾರರ ಕಛೇರಿ ಮುಂದೆ ಧರಣಿ ಸತ್ಯಾಗ್ರಹ ಹೂಡಬೇಕೆಂದುನಿರ್ಧರಿಸಿದ್ದರಮೇರೆಗೆಕಾರ್ಕಳ ಒಂದು ತಾಲ್ಲೂಕನ್ನು ಬಿಟ್ಟು ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಈ ಕಾರ್ಯಕ್ರಮದಲ್ಲಿ ಜಿಲ್ಲೆಯಾದ್ಯಂತ ಮೂರು ಸಾವಿರಕ್ಕೂ ಮಿಕ್ಕು ರೈತರು, ಕೃಷಿ ಕಾರ್ಮಿಕರು ಭಾಗವಹಿಸಿದ್ದರು. ಈ ಕಾರ್ಯಕ್ರಮಕ್ಕೆ ನೂರಾರು ಜನ ಬೀಡಿ ಹೆಂಚು ಕಾರ್ಖಾನೆಗಳ ಕಾರ್ಮಿಕರು ಬೆಂಬಲ ನೀಡಿ ಭಾಗವಹಿಸಿದ್ದರು.

ಮಂಗಳೂರು : ಮಂಗಳೂರು ತಾಲ್ಲೂಕು ಕಛೇರಿಯ ಮುಂದೆ ನಡೆದ ಧರಣಿ ಸತ್ಯಾಗ್ರಹದಲ್ಲಿ ಸಾವಿರಕ್ಕೂ ಹೆಚ್ಚು ಜನ ರೈತ ಕೃಷಿ ಕಾರ್ಮಿಕರು ಭಾಗವಹಿಸಿದ್ದರು. ತಹಶೀಲ್ದಾರರಿಗೆ ಜಿಲ್ಲಾಧಿಕಾರಿಗಳಿಗೆ ಮನವಿ ನೀಡಿದ ನಿಯೋಗದಲ್ಲಿ ಕಾಂ. ಪಿ. ರಾಮಚಂದ್ರ ರಾವ್, ಪ್ರಧಾನ ಕಾರ್ಯದರ್ಶಿ ಕರ್ನಾಟಕ ಪ್ರಾಂತ ರೈತ ಸಂಘ, ಕಾಂ. ಕೆ. ಆರ್. ಶ್ರೀಯಾನ್ ಅಧ್ಯಕ್ಷರು ದ. ಕ. ಜಿಲ್ಲಾ ಘಟಕ, ಕಾಂ. ಯು. ಜನಾರ್ಧನ ನಾಯಕ್, ಕಾಂ. ಪರಮೇಶ್ವರ ಶೆಟ್ಟಿ ಭಾಗವಹಿಸಿದ್ದರು.

ಪ್ರದರ್ಶನಕಾರರನ್ನುದ್ದೇಶಿಸಿ ಕಾಂ. ಪಿ. ರಾಮಚಂದ್ರರಾವ್, ಕಾಂ| ಕೆ. ಆರ್. ಶ್ರೀಯಾನ್ ಭಾಷಣ ಮಾಡಿದರು.

ಕುಂದಾಪುರ : ತಾಲ್ಲೂಕು ಕಚೇರಿಯಬಳಿ 800 ಜನ ರೈತರು, ಕೃಷಿ ಕಾರ್ಮಿಕರು ಕಾಂ. ಅಬ್ರಹಾಂ ಕರ್ಕಡ,ರಾಜ್ಯಕಾರ್ಯದರ್ಶಿ:ಕಾಂ.ದಾಸ್ ಭಂಡಾರಿ, ಕಾಂ. ವೆಂಕಟೇಶ್ ನಾಯಕ್ ಕಾಂ ಸಿ. ನಾರಾಯಣ, ಕಾಂ. ಕೆ. ಶಂಕರ್‌ರವರ ನೇತೃತ್ವದಲ್ಲಿ ಧರಣಿ ಸತ್ಯಾಗ್ರಹ ಹೂಡಿ ಮುಖ್ಯಮಂತ್ರಿಗಳಿಗೆ ಮನವಿಯನ್ನು ಅರ್ಪಿಸಿದರು. ಬಹಿರಂಗ ಸಭೆಯಲ್ಲಿ ರೈತರ ಸಮಗ್ರ ಬೇಡಿಕೆಗಳಿಗಾಗಿ ಹೋರಾಡಲು ದೃಢ ನಿರ್ಧಾರ ಕೈಗೊಳ್ಳಲಾಯಿತು.

ಉಡುಪಿ : ಡೇವಿಡ್ ಕರ್ಕಡರ ನೇತೃತ್ವದಲ್ಲಿ 300 ಜನ ರೈತರು ಕೃಷಿ ಕಾರ್ಮಿಕರು ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು.

ಬಂಟ್ವಾಳ : 300 ಜನ ರೈತರ ಕಾಂ ಬಿ. ವಾಸುಗಟ್ಟಿ, ಬಿ, ನಾರಾಯಣ, ರುಕ್ಮಯ್ಯ ಪೂಜಾರಿ, ಪೂವಯ್ಯ ಬಂಗೇರ ಇವರ ನೇತೃತ್ವದಲ್ಲಿ ತಾಲೂಕು ಕಛೇರಿಯ ಮುಂದೆ ಧರಣಿ ಸತ್ಯಾಗ್ರಹ ಹೂಡಿ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.

ಪುತ್ತೂರು : 200ಕ್ಕೂ ಹೆಚ್ಚು ರೈತರು ಪುತ್ತೂರಿನ ಬೀದಿಗಳಲ್ಲಿ ಮೆರವಣಿಗೆಯಲ್ಲಿ ಸಾಗಿ ತಾಲ್ಲೂಕು ಕಛೇರಿ ತಲುಪಿ ಧರಣಿಸತ್ಯಾಗ್ರಹ ಹೂಡಿದರು. ನಂತರ ಬಹಿರಂಗ ಸಭೆಯನ್ನುದ್ದೇಶಿಸಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಕಾಂ| ಪರಮೇಶ್ವರನ್ ನಂಬೀಶನ್‌ರವರು, ಕಾಂ ಬಿ. ರಾಮಕೃಷ್ಣರವರು, ಕಾ. ಬಿ. ಅಣ್ಣನವರುಮಾತನಾಡಿದರು

ಬೆಳ್ತಂಗಡಿ : ಸಂತೆಕಟ್ಟೆಯಿಂದ ಮೆರವಣಿಗೆ ಹೊರಟು ಪ್ರಮುಖ ಬೀದಿಗಳಲ್ಲಿ ಸಾಗಿದ ರೈತರ ಮೆರವಣಿಗೆ ತಹಸೀಲ್ದಾರ್, ಕಛೇರಿಯಮುಂದೆ ಸತ್ಯಾಗ್ರಹ ಹೂಡಿತು. ತಾಲ್ಲೂಕು ರೈತ ಸಂಘದಕಾರ್ಯದರ್ಶಿ ಬಿ ವಿಷ್ಣು ಮೂರ್ತಿ ಅಧ್ಯಕ್ಷರಾದ ಪಿ. ಪಿ, ಮಥಾಯಿ, ಕಾಂ. ಪರಮೇಶ್ವರ,ಕಾಂ.ಪಿ. ಲಕ್ಷ್ಮಣ ಗೌಡರನೇತೃತ್ವದ ನಿಯೋಗವು ಮನವಿ ಸಲ್ಲಿಸಿ ತಹಸೀಲ್ದಾರರು, ಅರಣ್ಯ ಇಲಾಖೆ ಅಧಿಕಾರಿಗಳೊಡನೆ ರೈತರ ಸಮಸ್ಯೆಗಳ ಬಗ್ಗೆ ಮಾತು ಕತೆ ನಡೆಸಿದರು.

ಸುಳ್ಯ : ತಾಲ್ಲೂಕು ರೈತ ಸಂಘದ ಕಾರ್ಯದರ್ಶಿ ಕೆ. ಮೋನಪ್ಪಗೌಡರು, ಅಧ್ಯಕ್ಷ ಕಾಂ. ಕೆ. ಸೂರ್ಯನಾರಾಯಣ ಭಟ್ಟರ ನೇತೃತ್ವದಲ್ಲಿ 400 ಕ್ಕೂ ಹೆಚ್ಚು ಅಗಮೆದಾರರು, ರೈತರು ಮೆರವಣಿಗೆ, ಧರಣಿ ಸತ್ಯಾಗ್ರಹ ನಡೆಸಿದರು. ತಾಲ್ಲೂಕು ಕಛೇರಿಯ ಆವರಣದಲ್ಲಿಯೇ ಸೇರಿದ ಸಭೆಗೆ ರೈತರ ಬೇಡಿಕೆಗಳ ಬಗ್ಗೆ ಮುಂದೆ ಮಾಡಬೇಕಾದ ಹೋರಾಟಗಳ ಬಗ್ಗೆ ವಿವರಣೆ ನೀಡಲಾಯಿತು.

ಬೆಂಗಳೂರು ಜಿಲ್ಲೆ :

ಬೆಂಗಳೂರು ನಗರದ ಸಿಟಿ ಮಾರ್ಕೆಟ್ ಬಳಿಯ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಿಂದ ಹೋರಾಟ ರೈತರ, ಕೃಷಿ ಕಾರ್ಮಿಕರ ಮೆರವಣಿಗೆಯಲ್ಲಿ ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಛೇರಿ, ತಹಸೀಲ್ದಾರರ ಕಛೇರಿಗಳ ಮುಂದೆ ಹಾದು ಗ್ರಾಮಾಂತರ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಧರಣಿ ಸತ್ಯಾಗ್ರಹ ಹೂಡಿದರು. ಸಿ.ಐ.ಟಿ.ಯು ರಾಜ್ಯ ಸಮಿತಿ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್‌ರವರ ನೇತೃತ್ವದಲ್ಲಿ, "ಪ್ರಾಂತ ರೈತ ಸಂಘ ಜಿಲ್ಲಾ ಘಟಕದ ಅಧ್ಯಕ್ಷ ಮುಗುವಾಳಪ್ಪ ಪ್ರ.ಕಾರ್ಯದರ್ಶಿ ಜಗನ್ನಾಥ್, ಲಕ್ಕಣ್ಣ, ರಾಮಭದ್ರಯ್ಯ, ಮೊದಲಾದವರು ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಿ ಜಿಲ್ಲಾ ಮಟ್ಟದಲ್ಲಿಯೇ ತೀರ್ಮಾನವಾಗಬಹುದಾದ ಬೇಡಿಕೆಗಳ ಬಗ್ಗೆ ಚರ್ಚೆ ನಡೆಸಿದರು.

ನಂತರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾಂ. ಎಸ್. ಸೂರ್ಯನಾರಾಯಣರಾವ್, ಕಾಂ. ಪಿ. ಮುಗವಾಳಪ್ಪ, ಕಾಂ. ಪಿ. ಜಗನ್ನಾಥ್, ಕಾ. ಲಕ್ಕಣ್ಣ ಮಾತನಾಡಿದರು.

ಬಿಜಾಪುರ ಜಿಲ್ಲೆ :

ಪ್ರತಿ ತಾಲ್ಲೂಕು ಕೇಂದ್ರದಿಂದಲೂ ಕಾಲು ನಡಿಗೆಯಲ್ಲಿ ಜಾಥಾ ಹೊರಟು ಹಳ್ಳಿ ಹಳ್ಳಿಗಳಲ್ಲಿ ರೈತರ ಹತ್ತು ಬೇಡಿಕೆಗಳ ಬಗ್ಗೆ ಪ್ರಚಾರ ಮಾಡುತ್ತಾ ಬಿಜಾಪುರವನ್ನು ತಲುಪಿದ ರೈತರು ಪ್ರಾಂತ ರೈತ ಸಂಘದ ಕಛೇರಿಯೆಡೆ ಕೂಡಿದ ಸಾವಿರಾರು ರೈತರು, ಕೃಷಿ ಕಾರ್ಮಿಕರು ಕೊಂಬು ಕಹಳೆ ಗಳೊಂದಿಗೆ ಬಿಜಾಪುರದ ಮುಖ್ಯ ಬೀದಿಗಳಲ್ಲಿ ಹಾಯ್ದು ಜಿಲ್ಲಾಧಿಕಾರಿಗಳ ಕಚೇರಿ ತಲುಪಿದರು.

ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಿದ ನಂತರ ಬಹಿರಂಗ ಸಭೆಯನ್ನುದ್ದೇಶಿಸಿ ಪ್ರಾಂತ ರೈತ ಸಂಘ ರಾಜ್ಯ ಘಟಕದ ಉಪಾಧ್ಯಕ್ಷ ಕಾಂ. ಭೀಮಸೀ ಕಲಾದಗಿಯವರು ಬಿಜಾಪುರದಲ್ಲಿತೀವ್ರವಾದ ಬರಗಾಲದಿಂದ ಗುಳೇ ಹೋದ ರೈತರ ಬಗ್ಗೆ, ಬರಗಾಲ ಕಾಮಗಾರಿಗಳಲ್ಲಿ ಭ್ರಷ್ಟಾಚಾರದ ಬಗ್ಗೆ ಮಾತನಾಡಿದರು. ಕಾಂ. ಅಣ್ಣಾರಾಯ ಈಳಗೇರ ಮುಳವಾಡ ನೀರಾವರಿ ಯೋಜನೆ ಬಗ್ಗೆ ಒತ್ತಾಯಿಸಿದರೆ, ಕಾಂ. ಎ. ಯು. ಗೋಡಿಹಾಳ ಇವರು ರೈತರ ಬೇಡಿಕೆಗಳನ್ನು ಓದಿ ಹೇಳಿದರು. ಕಾಂ ಎ. ಜೆ. ಹೊನ್ನುಟಗಿ ಮೊದಲಾದವರು ಭಾಗವಹಿಸಿದ್ದರು.

ಗುಲ್ಬರ್ಗಾ : ಸೈಕಲ್ ಜಾಥಾ, ಕಾಲ್ನಡಿಗೆ ಜಾಥಾಗಳ ಮೂಲಕ ಹಳ್ಳಿ ಹಳ್ಳಿಗಳನ್ನು ಹಾದು, ದಾರಿಯುದ್ದಕ್ಕೂ ಬಹಿರಂಗ ಸಭೆ ನಡೆಸುತ್ತಾ ರೈತರ ಹತ್ತು ಬೇಡಿಕೆಗಳ ಬಗ್ಗೆ ಪ್ರಚಾರ ನಡೆಸುತ್ತಾ ಗುಲ್ಬರ್ಗಾವನ್ನು ತಲುಪಿದ ರೈತರು, ಕೃಷಿ ಕಾರ್ಮಿಕರು,

(8ನೇ ಪುಟ ನೋಡಿ)

ದ. ಕ. ಜಿಲ್ಲೆಯಲ್ಲಿ ನೂತನ ಶಿಕ್ಷಣ ನೀತಿ ವಿರುದ್ಧ

5000 ವಿದ್ಯಾರ್ಥಿಗಳ ಮುಷ್ಕರ

ಕೇಂದ್ರ ಸರಕಾರ ಅಂಗೀಕರಿಸಿರುವ ಜನ ವಿರೋಧಿಯಾದ "ನೂತನ ಶಿಕ್ಷಣ ನೀತಿ"ಯನ್ನು ವಿರೋಧಿಸಲು ಜುಲೈ 25 ರಂದು ರಾಜ್ಯಾದ್ಯಂತ ಪ್ರತಿಭಟನಾ ದಿನವನ್ನು ಆಚರಿಸಬೇಕೆಂದು ಎಸ್ ಎಫ್ ಐ ಕರ್ನಾಟಕ ರಾಜ್ಯ ಸಮಿತಿ ಕರೆ ನೀಡಿತ್ತು. ಎಸ್ ಎಫ್ ಐ ದ. ಕ. ಜಿಲ್ಲಾ ಸಮಿತಿ ಇದೇ ಸಂದರ್ಭದಲ್ಲಿ ಡೊನೇಶನ್ ವಿರೋಧಿ ಚಳವಳಿಯನ್ನು ನಡೆಸಬೇಕೆಂದು ನಿರ್ಧರಿಸಿದ ಪ್ರಕಾರ, ಕುಂದಾಪುರ ಘಟಕವು ಅಂದು ಮುಷ್ಕರ ನಡೆಸಲು ವಿದ್ಯಾರ್ಥಿಗಳಿಗೆ ಕರೆಕೊಟ್ಟಿತ್ತು.

ಮುಂಚಿತವಾಗಿಯೇ ಪ್ರಚಾರ ನಡೆಸಿದ್ದರಿಂದ ತಾ|| 25 ರಂದು ಭಂಡಾರ್ಕಾರ್ಸ್ ಕಾಲೇಜಿನ ಹೆಚ್ಚಿನ ವಿದ್ಯಾರ್ಥಿಗಳು ಕಾಲೇಜಿಗೆ ಬಂದಿರಲಿಲ್ಲ. ಬಂದವಿದ್ಯಾರ್ಥಿಗಳೂ ತರಗತಿಗೆ ಹಾಜರಾಗಲಿಲ್ಲ. ಹೀಗೆ ಕುಂದಾಪುರ ಎಸ್ ಎಫ್ ಐ ಇತಿಹಾಸದಲ್ಲೇ ಮೊದಲ ಬಾರಿಗೆ, ಸಂಘಟನೆಯ ಸ್ವತಂತ್ರ ಕರೆಯ ಮೇರೆಗೆ ಪ್ರಮುಖ ಕೇಂದ್ರವಾದ ಭಂಡಾರ್ಕಾರ್ಸ್ ಕಾಲೇಜ್‌ನಲ್ಲಿ ಮುಷ್ಕರವು ಯಶಸ್ವಿಯಾಗಿ ನಡೆಯಿತು.

ಕುಂದಾಪುರದ ಸರಕಾರಿ ಕಿರಿಯ ಕಾಲೇಜ್, ಸೈಂಟ್‌ಮೇರಿ ಪ್ರೌಢಶಾಲೆ, ಕಾನ್ವೆಂಟ್ ಪ್ರೌಢಶಾಲೆ, ಕೋಟೇಶ್ವರದ ಸರಕಾರಿ ಕಿರಿಯ ಕಾಲೇಜ್ ವಿದ್ಯಾರ್ಥಿಗಳೂ ಸಂಘಟನೆಯ ಮನವಿ ಮೇರೆಗೆ ಮುಷ್ಕರದಲ್ಲಿ ಪಾಲ್ಗೊಂಡರು. ಬಸ್ರೂರಿನ ಶ್ರೀ ಶಾರದ ಕಾಲೇಜ್‌ನ ವಿದ್ಯಾರ್ಥಿಗಳು ಸ್ವಯಂ ಸ್ಫೂರ್ತರಾಗಿ ತರಗತಿಗಳನ್ನು ಬಹಿಷ್ಕರಿಸಿ ಮುಷ್ಕರದಲ್ಲಿ ಭಾಗವಹಿಸಿದ್ದರು. ಇದರಿಂದಾಗಿ ಒಟ್ಟಾರೆಯಾಗಿ ಸುಮಾರು 5000 ವಿದ್ಯಾರ್ಥಿಗಳು ಈ ಮುಷ್ಕರದಲ್ಲಿ ಭಾಗವಹಿಸಿದಂತಾಗಿ, ಇದೇ ಪ್ರಥಮ ಬಾರಿಗೆ ವ್ಯಾಪಕವೂ ಯಶಸ್ವಿಯೂ ಆದ ಹೋರಾಟವಾಗಿ ದಾಖಲಾಯಿತು.

ಎಸ್ ಎಫ್ ಐ ರಾಜ್ಯ ಸಮಿತಿ ಸಹಕಾರ್ಯದರ್ಶಿ ಕೆ. ವಿಶ್ವನಾಥ, ಜಿಲ್ಲಾ ಉಪಾಧ್ಯಕ್ಷ ಅಶೋಕ ಕೆ. ನ್ಯಾರ್, ನಗರ ಸಮಿತಿ ಕಾರ್ಯದರ್ಶಿ ಯು. ರಮಾನಾಥ ಇವರುಗಳು ಮುಷ್ಕರದ ನೇತೃತ್ವವನ್ನು ವಹಿಸಿದ್ದರು. ಸುಮಾರು 200 ವಿದ್ಯಾರ್ಥಿಗಳು ಮೆರವಣಿಗೆ ತೆರಳಿ ತಹಸಿಲ್ದಾರ್‌ರಿಗೆ ಮನವಿ ಪತ್ರವನ್ನು ಅರ್ಪಿಸಲಾಯಿತು.

ಸ್ವಾತಂತ್ರ್ಯ ಪಡೆದ ದಿನ:

ಆಗಸ್ಟ್ 15 ರಂದು ರಾಷ್ಟ್ರೀಯ ಸ್ವಾತಂತ್ರ್ಯದ ದಿನ. ನಾಲ್ಕಾರು ದಶಕಗಳ ಕಾಲ ಭಾರತದ ಜನತೆ ತಮ್ಮ ತನು ಮನ ಧನಗಳನ್ನು ತೆತ್ತು ಕಾರ್ಮಿಕರು ರೈತರು ವಿದ್ಯಾರ್ಥಿಗಳು ಯುವಕರು, ಮಹಿಳೆಯರು ಕೂಡಿ ಹೋರಾಡಿ, ಅಸೀಮ ತ್ಯಾಗ ಮಾಡಿ ಪಡೆದ ಸ್ವಾತಂತ್ರ್ಯ ಅದು. "ನೆನೆ, ನೆನೆ, ಓ ಭಾರತಭಾಂಧವ ನೆನೆ ನೆನೆ ಆ ದಿನವ" ಎಂದು ಕವಿ ಕರೆ ನೀಡುತ್ತಾನೆ ಹೌದು, 39 ವರ್ಷಗಳು ಕಳೆದು 40ನೆಯ ವರ್ಷದ ಹೊಸ್ತಿಲಲ್ಲಿ ಕಾಲಿಡುವ ಆ ದಿನ ನಾವು ನೆನೆಯುವುದೇನು ? ನಾವು ಪಡೆದ ಸ್ವಾತಂತ್ರ್ಯದ ಸ್ವರೂಪವೇನು ?

ಜನ ಸಮುದಾಯ ಯಾವ ಕನಸಿಗಾಗಿ, ತಮ್ಮನ್ನೇ ತೆತ್ತರೋ ಆ ಈಡೇರದ ಬಯಕೆಗಳನ್ನೇ ? 21ನೇ ಶತಮಾನ ಬಂದರೂ ಈ ಕನಸುಗಳು ಕೈಗೂಡಲಾರವೇಕೆ ಎಂಬುದನ್ನೇ ? ಈಡೇರದ ಆ ಕನಸುಗಳನ್ನು ಪಡೆಯಲು ಜನತೆಯ ವಿವಿಧ ಭಾಗಗಳು ಎಡಶಕ್ತಿಗಳ ನೇತೃತ್ವದಲ್ಲಿ ಹೋರಾಟ ನಡೆಸಿರುವುದನ್ನೇ ? ಈ ಶಕ್ತಿಗಳ ಹೋರಾಟದ ಸಂಕೇತವಾಗಿ 9-10 ವರ್ಷಗಳ ದೀರ್ಘಕಾಲ ಎಡರಂಗ ಸರ್ಕಾರಗಳು ಪ. ಬಂಗಾಳ, ತ್ರಿಪುರಾಗಳಲ್ಲಿ ಬೆಳಗುತ್ತಿರುವುದನ್ನೇ ? ಈ ಹೋರಾಟಗಳನ್ನು ಹತ್ತಿಕ್ಕಲು ಆಳುವ ಕಾಂಗ್ರೆಸ್ (ಐ) ಸರಕಾರ ಎಸ್ಮಾ, ಎನ್ ಎಸ್ ಎ ಗಳ ಮೂಲಕ, ಭಯೋತ್ಪಾದಕ ವಿರೋಧಿ ಕಾನೂನು, ಡಿಸ್ಟರ್ಬ್ಡ್ ಏರಿಯಾಸ್ ಆಕ್ಟ್‌ಗಳ ಮೂಲಕ ಜನ ಹೋರಾಟವನ್ನು ಹತ್ತಿಕ್ಕಿ ದಮನ ಮಾಡಲು ಸಜ್ಜಿತವಾಗಿರುವುದನ್ನೇ ? ಜನಸಮುದಾಯಗಳ ತಮ್ಮ ಕೆಚ್ಚೆದೆಯ ಹೋರಾಟದಿಂದ ಪಡೆದ ಹಕ್ಕುಗಳನ್ನು ಕಸಿದುಕೊಳ್ಳಲು ನಮ್ಮ ಆಳುವ ವರ್ಗಗಳು ನಡೆಸಿರುವ ಪ್ರಯತ್ನವನ್ನೇ

ಭಾರತದ ಅನೇಕ ಕಡೆ ಈ ಅತೃಪ್ತಿ ಹಿಂದೂ-ಮುಸ್ಲಿಂ, ಸಿಕ್-ಹಿಂದೂ ಅಸ್ಸಾಮೀ-ಅಸ್ಸಾಮೀಯರಲ್ಲದವರು, ನೇಪಾಳಿ-ಸಮಸ್ಯೆ ನೇಪಾಳಿ ವಿರೋಧಿ ಎಂಬ ದೇಶವನ್ನೇ ಛಿದ್ರ ಛಿದ್ರಮಾಡುವ ರೂಪತಳೆಯುತ್ತಿರುವುದನ್ನೇ ?

ಭಾರತವನ್ನು ತುಂಡು ತುಂಡುಮಾಡಿ ಮತ್ತೆ ತಮ್ಮ ಪಿಶಾಚಿ ಕೈ ಚಾಚಲು, ಅಮೇರಿಕನ್ ಸಾಮ್ರಾಜ್ಯಶಾಹಿ ನೇತೃತ್ವದ ಬ್ರಿಟನ್, ಜರ್ಮನಿ ಇನ್ನಿತರ ಸಾಮ್ರಾಜ್ಯಶಾಹಿ ರಣಹದ್ದುಗಳ ಬೆಂಬಲ ಪಡೆದು ಪಂಜಾಬ್, ಅಸ್ಸಾಂಗಳಲ್ಲಿ ನಡೆಸಿರುವ ಪ್ರಯತ್ನಗಳನ್ನೇ? ನಮ್ಮ ಕತ್ತನ್ನೇ ಹಿಸುಕಲು ಪ್ರಯತ್ನಿಸುತ್ತಿರುವ ಈ ಕೈಗಳನ್ನು ಮುದ್ದಿಸುತ್ತಿರುವ, ನಮ್ಮ ದೇಶವನ್ನು ಅಮೇರಿಕ, ಜಪಾನ್ ಇತ್ಯಾದಿಗಳ ಸೂರೆಗೆ ತೆರೆದಿಡುತ್ತಿರುವ ರಾಜೀವ ಗಾಂಧಿ ಸರಕಾರದ ಒಡೆಯುವವರೊಡನೆಯೂ ಸಹಕಾರದ ನೀತಿಯನ್ನೇ ?

ನಮ್ಮ ದೇಶದ ಸುತ್ತ ಭಾರತ ವಿರೋಧಿ ರಾಷ್ಟ್ರಗಳ ಚಕ್ರವ್ಯೂಹ ಹೆಣೆಯುತ್ತಿರುವುದನ್ನೇ ? ಪಾಕಿಸ್ತಾನ, ಶ್ರೀಲಂಕಾ, ಬಂಗ್ಲಾ ದೇಶಗಳ ಭಾರತ ವಿರೋಧಿ ಅಪಪ್ರಚಾರ, ದೇಶದ್ರೋಹಿಗಳಿಗೆ ತರಬೇತಿ, ಶಸ್ತ್ರಾಸ್ತ್ರ ನೀಡಿಕೆಗಳನ್ನೇ ? ಇದರಿಂದ ಭಾರತದ ಮೇಲೆ ಯುದ್ಧದ ಕಾರ್ಮೋಡಗಳು ದಟ್ಟವಾಗುತ್ತಿರುವುದನ್ನೇ ?

ಎಲ್ಲಕ್ಕಿಂತ ಮಿಗಿಲಾಗಿ, ಭಾರತವೇ ಏಕೆ ಇಡೀ ವಿಶ್ವವನ್ನೇ, ಇಡೀ ಮಾನವತೆಯನ್ನೇ ಧೂಳಿಪಟ ಮಾಡಲು, ಸಮಾಜವಾದಿ ದೇಶಗಳನ್ನು ಮುರಿದು ಮೂಲೆಗುಂಪು ಮಾಡಲು ನಡೆಯುತ್ತಿರುವ ಅಣು ಯುದ್ಧದ, ತಾರಾ ಯುದ್ಧದ ಮೂರನೆಯ ಮಹಾಯುದ್ಧ ಪ್ರಯತ್ನ ನಡೆಯುತ್ತಿರುವುದನ್ನೇ ?

"ನೆನೆ ನೆನೆ ಭಾರತ ಬಾಂಧವ ನೆನೆ ನೆನೆ" ಈ ಎಲ್ಲವನ್ನೂ ನೆನೆ ನೆನೆ.

ಅರಸುತನದ ನೂರಾರು ಕೈಗಳು ಮಿಂಚಿನಂತೋಡಿದ್ದಾವೆ
ಘೋರ ಶಾಸನದ ಜಾಲ ಹೆಣೆದಿದ್ದಾವೆ ಮುಸುಗಿದ್ದಾವೆ
ಸಜ್ಜಾಗು ಹೋರಾಟಕ್ಕೆ

ಸಂಪೂರ್ಣ ಸ್ವಾತಂತ್ರ್ಯ—ಮೊದಲು ಎತ್ತಿದ್ದೇ ಕಮ್ಯುನಿಸ್ಟರು

ಭಾರತದ ಸ್ವಾತಂತ್ರ್ಯ ಆಂದೋಳನ ನಿಧಾನವಾಗಿ (ಜನರ ಒತ್ತಡಕ್ಕೆ ಒಳಗಾಗಿ) ಒಪ್ಪಿದ, ಈಗ ಸರ್ವೇ ಸಾಮಾನ್ಯವಾಗಿರುವ ಎಲ್ಲಾ ಆಧುನಿಕ ವಿಚಾರಗಳನ್ನು ಮೊಟ್ಟ ಮೊದಲು ಪ್ರಸ್ತುತಪಡಿಸಿದವರು ಕಮ್ಯುನಿಸ್ಟರು ಎಂಬ ವಿಷಯ ಈಗ ವಿಚಿತ್ರವೆನಿಸಬಹುದು. ಸಂಪೂರ್ಣ ಸ್ವಾತಂತ್ರ್ಯವನ್ನು ಮೊದಲ ಬಾರಿಗೆ ಪ್ರತಿಪಾದಿಸಿ ಅದನ್ನು ರಾಷ್ಟ್ರೀಯ ಕಾಂಗ್ರೆಸ್ ಮುಂದೆ ಎತ್ತಿದವರೂ ಕೂಡಾ ಕಮ್ಯುನಿಸ್ಟರು ಎಂಬುದು ಬಹಳ ಜನಕ್ಕೆ ತಿಳಿದಿಲ್ಲ.

-ಬಿ. ಟಿ. ರಣದಿವೆ.



ಬ್ರಿಟೀಷರಅಧೀನವಿದ್ದ ಪೋಲಿಸ್ ಹಾಗೂ ಶಸ್ತ್ರಪಡೆಗಳಲ್ಲಿ ಅಸಂತೃಪ್ತಿಯ ಸ್ಫೋಟ 1946ರ ಒಂದು ಮಹತ್ವದ ಘಟನೆ, ರಾಯಲ್ ಇಂಡಿಯನ್ ಏರ್‌ಪೋರ್ಟಿನ ಭಾರತೀಯ ಸಿಬ್ಬಂದಿ ಬ್ರಿಟಿಶ್ ವೈಮಾನಿಕಸೈನಿಕರೊಂದಿಗೆಸಮಾನತೆಗೆ ಒತ್ತಾಯಿಸಿ, ಭೇದಭಾವಗಳನ್ನೆಲ್ಲಾ ಅಂತ್ಯಗೊಳಿಸಬೇಕೆಂದು ಒತ್ತಾಯಿಸಿ, ಫೆಬ್ರವರಿ 25 ರಂದು ಮುಷ್ಕರ ಹೂಡಿದರು. 1500ಕ್ಕೂ ಹೆಚ್ಚು ವೈಮಾನಿಕರು ಇದರಲ್ಲಿ ಭಾಗವಹಿಸಿದರು

ಅದಕ್ಕೆ ಕೆಲವೇ ದಿನ ಮೊದಲು ಅಂದರೆ 19ರಂದುಆರಂಭವಾದ ನಾವಿಕ ಪಡೆಗಳ ಬಂಡಾಯ ದ್ವಿತೀಯ ಮಹಾ

ಬ್ರಿಟೀಷರನ್ನು ನಡುಗಿಸಿದ ರಿನ್ ಮುಷ್ಕರ

ಯುದ್ಧ ನಂತರ ಸ್ವಾತಂತ್ರ್ಯ ಆಂದೋಲನದ ಒಂದು ದೊಡ್ಡ ಘಟನೆ. ನಾವಿಕರು ಭೇದಭಾವಗಳ ನಿರ್ಮೂಲನ ಮತ್ತು ಇತರ ಆರ್ಥಿಕ ಬೇಡಿಕೆಗಳನ್ನು ಮಾತ್ರವಲ್ಲ, ಕೆಲವು ಶುದ್ಧ ರಾಜಕೀಯ ಬೇಡಿಕೆಗಳನ್ನೂ ಮುಂದಿಟ್ಟರು. ರೇಡಿಯೋ ಆಪರೇಟರ್ ದತ್ತ ಎಂಬುವರನ್ನು ಬ್ರಿಟೀಶರ ವಿರುದ್ಧ ನಾವಿಕ ಬ್ಯಾರಾಕುಗಳಲ್ಲಿ ಘೋಷಣೆ ಬರೆದುದಕ್ಕಾಗಿ ಬಂಧಿಸಲಾಯಿತು. ತಕ್ಷಣ ಎಲ್ಲಾ ಬ್ಯಾರಾಕುಗಳ ನಾವಿಕರು ಮುಷ್ಕರ ಹೂಡಿದರು. ಮುಷ್ಕರ ಮುಂದೆ ಮುಂಬೈನ ಎಲ್ಲಾ ನಾವಿಕ ಪಡೆಗಳಿಗೂ, ಮುಂಬೈನಲ್ಲಿ ಲಂಗರು ಹಾಕಿದ್ದ ಇಪ್ಪತ್ತು ಯುದ್ಧ ಹಡಗುಗಳಿಗೂ ವ್ಯಾಪಿಸಿತು. ಫೆಬ್ರುವರಿ 19 ರಂದು ನಾವಿಕ ಪಡೆಯ 20 ಸಾವಿರ ಸೈನಿಕರು ಮುಷ್ಕರದಲ್ಲಿ ಭಾಗವಹಿಸಿದರು. ಬಿಳಿ ಸಮವಸ್ತ್ರದ ಸೈನಿಕರ ಬಾಯಲ್ಲಿ "ಜೈ ಹಿಂದ್" "ಇಂಕ್ವಿಲಾಬ್ ಜಿಂದಾಬಾದ್" "ಹಿಂದೂ ಮುಸ್ಲಿಂ ಒಂದಾಗಿ" "ಆಝಾದ್ ಹಿಂದ್ ಸೇನೆಯ ಬಂಧಿಗಳನ್ನು ಬಿಡುಗಡೆ ಮಾಡಿ ಹಾಗೂ "ಇಂಡೋ ಚೀನಾದಿಂದ ಭಾರತೀಯ ಸೈನಿಕರನ್ನು ವಾಪಸು ತರಿ" ಮುಂತಾದ ಘೋಷಣೆಗಳು! ಇನ್ನೊಂದೆರಡು ದಿನಗಳಲ್ಲಿ ಮುಷ್ಕರ ಕರಾಚಿ ಬಂದರಿಗೂ ವ್ಯಾಪಿಸಿತು.

ಫೆಬ್ರವರಿ 21 ಬ್ರಿಟಿಶ್ ಸೇನೆ ಮುಷ್ಕರ ನಿರತ ಭಾರತೀಯ ನಾವಿಕರ ಮೇಲೆ ಆಕ್ರಮಣ ನಡೆಸಿತು, ಏಳು ಗಂಟೆಗಳ ಕಾಲ ಭಯಾನಕ ಕದನ. ನಾವಿಕರು ಜನತೆಯ ನೆರವು ಕೇಳಿದರು; ಮೂರು ಪ್ರಮುಖ ರಾಜಕೀಯ ಪಕ್ಷಗಳಾದ ಕಾಂಗ್ರೆಸ್, ಮುಸ್ಲಿಂ ಲೀಗ್ ಹಾಗೂ ಕಮ್ಯುನಿಸ್ಟ್ ಪಕ್ಷಗಳನ್ನು ನೆರವು ಕೇಳಿದರು. ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಮುಖಂಡರು ಅವರಿಗೆ ನೆರವು ನೀಡುವ ಬದಲು ಬ್ರಿಟಿಷರಿಗೆ ಶರಣಾಗತರಾಗಲು ಸಲಹೆ ನೀಡಿದರು ! ಕಮ್ಯೂನಿಸ್ಟ್ ಪಕ್ಷ ಮತ್ತು ಕಾರ್ಮಿಕ ವರ್ಗ ಮಾತ್ರ ನಾವಿಕರ ಕರೆಗೆ ಓಗೊಟ್ಟರು. ಕಾಂಗ್ರೆಸ್ ಮುಖಂಡರ ಪ್ರಚಾರವನ್ನು ಕೂಡಾ ಬದಿಗೊತ್ತಿ ಮುಂಬೈಯ ಕಾರ್ಮಿಕರು ನಾವಿಕರಿಗೆ ಬೆಂಬಲವಾಗಿ ಫೆಬ್ರವರಿ 22 ರಂದು ಸಂಪೂರ್ಣ ಮುಷ್ಕರ ನಡೆಸಿದರು. ಫೆಬ್ರವರಿ 21ರಿಂದ23ರವರೆಗೆ ಬ್ರಿಟಿಷ್ ಗುಂಡುಗಳಿಗೆ 250 ಭಾರತೀಯರು ಬಲಿಯಾದರು. ಕಲ್ಕತ್ತಾ, ಮದ್ರಾಸ್, ಹೋರಾಟಗಳಲ್ಲೂ ಭಾರೀ ಮತ ಪ್ರದರ್ಶನಗಳು ನಡೆದವು.

ಆದರೂ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಮುಖಂಡರು ನಾವಿಕರ ಮೇಲೆ ಶರಣಾಗತರಾಗಲು ಒತ್ತಡ ಹಾಕುವುದನ್ನು ತೀವ್ರವಾಗಿ ಮುಂದುವರೆಸಿದರು ಕೊನೆಗೂ ನಾವಿಕರು ಈ ಒತ್ತಡಕ್ಕೆ ಮಣಿಯಬೇಕಾಯಿತು. ಸ್ವಾತಂತ್ರ್ಯ ಆಂದೋಲನದ ನೇತೃತ್ವದಲ್ಲಿದ್ದ ಕಾಂಗ್ರೆಸ್ ಹಾಗೂ ಲೀಗ್ ಮುಖಂಡರ ವಿಶ್ವಾಸ ಘಾತದಿಂದಾಗಿ ತನ್ನ ಹೋರಾಟವನ್ನು ನಿಲ್ಲಿಸಬೇಕಾಯಿತು

ಈ ಅವಧಿಯಲ್ಲಿ ಕಾಂಗ್ರೆಸ್ ಮತ್ತು ಲೀಗ್ ಮುಖಂಡರನ್ನು ಭಯಭೀತಗೊಳಿಸಿದ ಇತರ ಗಮನಾರ್ಹ ಹೋರಾಟಗಳೆಂದರೆ ಮಾರ್ಚ್ 1 ರಂದು ಜಬಲಪುರ್ ಸಿಪಾಯಿಗಳಮುಷ್ಕರ 18ರಂದು ಗೂರ್ಖಾ ಸೈನಿಕರ ಬಂಡಾಯ 19 ರಂದು ಅಲಹಾಬಾದ್ ಪೋಲಿಸರ ಉಪವಾಸ ಸತ್ಯಾಗ್ರಹ 22 ರಂದು ದಿಲ್ಲಿ ಪೊಲೀಸರ ಉಪವಾಸ ಮುಷ್ಕರ ಏಪ್ರಿಲ್ 3 ರಂದು ಬಿಹಾರಿನ ಹತ್ತು ಸಾವಿರ ಪೋಲಿಸರ ಮುಷ್ಕರ.

ದ್ವಿತೀಯ ಮಹಾಯುದ್ಧದ ನಂತರ ಸ್ವಾತಂತ್ರ್ಯ ಆಂದೋಲನದ ಒಂದು ದೊಡ್ಡ ಘಟನೆ, ನಾವಿಕರು ಭೇದ ಭಾವಗಳ ನಿರ್ಮೂಲನ ಮತ್ತು ಇತರ ಆರ್ಥಿಕ ಬೇಡಿಕೆಗಳನ್ನು ಮಾತ್ರವಲ್ಲ ಕೆಲವು ಶುದ್ಧ ರಾಜಕೀಯ ಬೇಡಿಕೆಗಳನ್ನೂ ಮುಂದಿಟ್ಟರು.

ಆಗಸ್ಟ್ ೧೫

ಅಲೆ ಅಲೆ ಆಗಿ ಮೇಲೆದ್ದ ರೈತ ಹೋರಾಟಗಳು

ಯುದ್ಧಾನಂತರ ಹಾಗೂ ಸ್ವಾತಂತ್ರ್ಯ ಮುನ್ನದ ಎರಡು ವರ್ಷಗಳಲ್ಲಿ ದೇಶದಲ್ಲಿ ಸೈನಿಕರ, ಕಾರ್ಮಿಕರ ಸಮರಶೀಲ ಹೋರಾಟಗಳು ಮಾತ್ರವಲ್ಲ, ರೈತ ಹೋರಾಟಗಳ ಅಲೆಯೇ ಎದ್ದಿತು. ದೇಶದ ಇತಿಹಾಸದಲ್ಲೇ ಅತ್ಯಂತ ದೊಡ್ಡ ರೈತ ಹೋರಾಟಗಳು ಈ ಅವಧಿಯಲ್ಲಿ ನಡೆದವು. ಸೈನಿಕರ ಮತ್ತು ಕಾರ್ಮಿಕರ ಹೋರಾಟಗಳ ಜತೆ-ಜತೆಗೇ ರೈತರ ಪ್ರಮುಖ ಬೇಡಿಕೆಯಾದ ಭೂಮಿಯ ಸುತ್ತ ಆರಂಭವಾದ ಈ ಹೋರಾಟಗಳಲ್ಲಿ ಇತರ ಹೋರಾಟಗಳಂತೆ ಆಜ಼ಾದ್ ಹಿಂದ್ ಸೇನೆಯ ಬಂಧಿಗಳ ಬಿಡುಗಡೆ ಮಾಡಬೇಕೆಂದು ಒತ್ತಾಯಿಸುವ ನಾವಿಕ ಸೈನಿಕರ ಬಂಡಾಯವನ್ನು ಬೆಂಬಲಿಸುವ ಘೋಷಣೆಗಳೂ ಗಟ್ಟಿಯಾಗಿ ಕೇಳಿ ಬಂದವು.

ಬಿಹಾರದಲ್ಲಿ ಬಖಸ್ತ್ ಆಂದೋಲನ, ಪಂಜಾಬಿನಲ್ಲಿ ಗೇಣಿ ಕಡಿತಕ್ಕಾಗಿ ಹಾಗೂ ನೀರಿನ ದರಗಳ ಹೆಚ್ಚಳವನ್ನು ವಿರೋಧಿಸಿ, ಮತ್ತು ಪೆಪ್ಸುವಿನಲ್ಲಿ ಗೇಣಿದಾರರಿಗೆ ಒಡೆತನ ಒತ್ತಾಯಿಸಿ ಹೋರಾಟಗಳು ನಡೆದವು. ಉತ್ತರ ಪ್ರದೇಶ, ಆಂಧ್ರಗಳಲ್ಲೂ ಇಂತಹುದೇ ಹೋರಾಟಗಳು ನಡೆದವು. ಕೇರಳದ ಅಲೆಪ್ಪಿಯಲ್ಲಿ ಭೂಮಾಲೀಕರ ದಬ್ಬಾಳಿಕೆ ವಿರುದ್ಧ ನಡೆದ ಹೋರಾಟ ತೀವ್ರ ರೂಪ ತಾಳಿ ಪುನ್ನಪ್ರಾ-ವಾಯಲಾರ್‌ನಲ್ಲಿ ರೈತರು ತೀವ್ರ ಪೋಲಿಸ್ ದಬ್ಬಾಳಿಕೆ ಎದುರಿಸಬೇಕಾಗಿ ಬಂತು. ಇದರಲ್ಲಿ ಸುಮಾರು ನೂರು ಜನ ಕಾರ್ಯಕರ್ತರು ಹುತಾತ್ಮರಾದರು. ಮಹಾರಾಷ್ಟ್ರದ ಠಾಣೆಯಲ್ಲಿ ವಾರಲೀಗಳು ಒತ್ತಾಯದ ಬಿಟ್ಟಿ ದುಡಿತ ಹಾಗೂ ಭೂಮಾಲೀಕರ ಶೋಷಣೆಯ ವಿರುದ್ಧ ಹೋರಾಡಿ ಒಂದೇ ವರ್ಷದೊಳಗೆ ಗಮನಾರ್ಹ ವಿಜಯ ಸಾಧಿಸಿದರು.

ಬಂಗಾಳದ ತೇಭಾಗಾ ಆಂದೋಲನ ಈ ಅವಧಿಯ ಒಂದು ಐತಿಹಾಸಿಕ ಆಂದೋಲನ. ಭೂಮಾಲಿಕರ ಜಮೀನುಗಳಲ್ಲಿ ಪಾಲುದಾರಿಕೆಯ ಮೇಲೆ ದುಡಿಯುವ ರೈತರ ಬೇಡಿಕೆಗಳ ಮೇಲೆ ನಡೆದ ಈ ಆಂದೋಲನದಲ್ಲಿ ರೈತರು, ವಿಶೇಷವಾಗಿ ರೈತಮಹಿಳೆಯರು ಅತ್ಯಂತ ಧೈರ್ಯದಿಂದ ಭೂಮಾಲೀಕರ ಗೂಂಡಾಗಳ ವಿರುದ್ಧ ಹೋರಾಡಿದರು. ಹತ್ತಿರದ ಕಲ್ಕತ್ತಾ ಹಾಗೂ ಇತರೆಡೆ ಕೋಮು ಘರ್ಷಣೆ ನಡೆಯುತ್ತಿದ್ದಾಗ ಈ ಆಂದೋಲನದಲ್ಲಿ ಹಿಂದೂ-ಮುಸ್ಲಿಂ ಭಾಗ ಪಾಲುದಾರ ರೈತರು ಹೆಗಲಿಗೆ ಹೆಗಲು ಕೊಟ್ಟು ಹೋರಾಡಿದ್ದು ಒಂದು ಗಮನಾರ್ಹ ಅಂಶ. ಇನ್ನೊಂದು ಗಮನಾರ್ಹ ಅಂಶವೆಂದರೆ ಇತರ ವಿಭಾಗಗಳ ಜನರೂ, ಮುಖ್ಯವಾಗಿ ಕೃಷಿ ಕಾರ್ಮಿಕರೂ ಇದರಲ್ಲಿ ಉತ್ಸಾಹದಿಂದ ಭಾಗವಹಿಸಿದುದು. ಆಂದೋಲನ ಮುಂದುವರೆಯುತ್ತಾ ಹೋದಂತೆ ಅದು ಹೆಚ್ಚೆಚ್ಚು ವ್ಯಾಪಕ ಹಾಗೂ ಸಮರಶೀಲವಾಗಲಾರಂಭಿಸಿತು.



“ಉಳುವವನೇ ಹೊಲದೊಡೆಯ” ಎಂಬುದು ಸಮರ ಘೋಷಣೆಯಾಯಿತು. ಸ್ವಾತಂತ್ರ್ಯದ ಮೊದಲು ಈ ಹೋರಾಟದಲ್ಲಿ ಸುಮಾರು 70 ರೈತರು ಹುತಾತ್ಮರಾದರೆ ಸ್ವಾತಂತ್ರ್ಯದ ನಂತರ ನಡೆದ ಎರಡನೇ ಸುತ್ತಿನ ಹೋರಾಟದಲ್ಲೂ ಸುಮಾರು ಇಷ್ಟೇ ರೈತರ ಪ್ರಾಣಾಹುತಿಯಾಯಿತು !

ಈ ಅವಧಿಯ ಹೋರಾಟಗಳಿಗೆಲ್ಲಾ ಕಿರೀಟಪ್ರಾಯವಾದುದು ಧೀರ ತೆಲಂಗಾಣಾ ಹೋರಾಟ. 1946 ರಲ್ಲಿ ಅಖಿಲ ಭಾರತ ಕಿಸಾನ್ ಸಭಾ ಸೇರಿದ ಆಂಧ್ರ ಮಹಾಸಭಾದ ನೇತೃತ್ವದಲ್ಲಿ

(6ನೇ ಪುಟ ನೋಡಿ)

ಕಾರ್ಮಿಕರ ಹೋರಾಟಗಳು

ಬ್ರಿಟೀಶ್ ಸಾಮ್ರಾಜ್ಯಶಾಹಿಯ ವಿರುದ್ಧ ಭಾರತೀಯ ಸೈನಿಕರು ಬಂಡೆದ್ದಾಗ ಭಾರತೀಯ ಕಾರ್ಮಿಕ ವರ್ಗ ಕಾಂಗ್ರೆಸ್ ಮುಖಂಡರ ವಿರೋಧವನ್ನು ಲೆಕ್ಕಿಸದೆ ಅವರಿಗೆ ಬೆಂಬಲವಾಗಿ ತಮ್ಮ ಮುಷ್ಕರದ ಅಸ್ತ್ರವನ್ನು ಬಳಸಿದರು ಎಂಬುದನ್ನು ನೋಡಿದೆವು. ವಾಸ್ತವವಾಗಿ 1946-47 ಇಂತಹ ಹಲವಾರು ಸಮರಶೀಲ ಹೋರಾಟಗಳಿಂದ ಆರ್ಥಿಕ ಹೋರಾಟಗಳು, ಜತೆಗೆ ರಾಜಕೀಯ ಹೋರಾಟಗಳು- ತುಂಬಿದ ಅವಧಿ. 1945ರಲ್ಲಿ 820 ಮುಷ್ಕರಗಳಲ್ಲಿ ಏಳೂವರೆ ಲಕ್ಷ ಕಾರ್ಮಿಕರು ಭಾಗವಹಿಸಿದ್ದರೆ, 1946ರಲ್ಲಿ 1629 ಮುಷ್ಕರಗಳಲ್ಲಿ ಹದಿನೈದೂವರೆ ಲಕ್ಷ ಕಾರ್ಮಿಕರು ಭಾಗವಹಿಸಿದರು. ಈ ಧೀರ ಮುಷ್ಕರಗಳು ಜನಸಮೂಹಗಳಲ್ಲಿ ಉತ್ಸಾಹ ತುಂಬಿದ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟಗಳಾಗಿ ಮಾರ್ಪಾಡು ಹೊಂದಿದವು. ಇಂತಹ ಹೋರಾಟಗಳಲ್ಲಿ ಪ್ರಮುಖವಾದವು ಅಂಚೆ ಮತ್ತು ತಂತಿ ಇಲಾಖೆಯ ಕಾರ್ಮಿಕರ ಹಾಗೂ ನೌಕರರ ಅನಿರ್ದಿಷ್ಟ ಕಾಲದ ಮುಷ್ಕರ.

1946 ರ ಜುಲೈ 11. ಪೋಸ್ಟ್‌ಮನ್ ಲೋಯರ್ ಗ್ರೇಡ್ ಸ್ಟಾಫ್ ಯೂನಿಯನ್‌ನ ಕರೆಗೆ ಓಗೊಟ್ಟು 16 ಅಂಶಗಳ ಬೇಡಿಕೆಗಳನ್ನು ಒತ್ತಾಯಿಸಿ ಅಂಚೆ-ತಂತಿ ನೌಕರರು ತಮ್ಮ ಕೆಲವು ಸಂಘಟನೆಗಳ ವಿರೋಧವನ್ನು ಹಾಗೂ ಬ್ರಿಟಿಷ್ ಸರಕಾರದ ಬೆದರಿಕೆಯನ್ನು ಲೆಕ್ಕಿಸದೆ ತಮ್ಮ ಅನಿರ್ದಿಷ್ಟ ಕಾಲದ ಮುಷ್ಕರ ಆರಂಭಿಸಿದರು. ಜುಲೈ 21ರ ವೇಳೆಗೆ ಮುಷ್ಕರ ದೇಶಾದ್ಯಂತ ಹರಡಿತು. ವಿಶೇಷವಾಗಿ ಬಂಗಾಳ, ಅಸ್ಸಾಂ, ಮದ್ರಾಸ್, ಮುಂಬೈ, ದಿಲ್ಲಿ, ರಾಜಪುತಾನಾ, ಮಧ್ಯಪ್ರಾಂತ್ಯ, ಬಿಹಾರ್, ಸಿಂಧ್ ಹಾಗೂ ಬಲೂಚಿಸ್ತಾನಗಳಲ್ಲಿ ಮುಷ್ಕರ ಅತ್ಯಂತ ಯಶಸ್ವಿಯಾಗಿತ್ತು. ಸಾಮ್ರಾಜ್ಯಶಾಹಿ-ವಿರೋಧಿ ಭಾವನೆಗಳಿಂದ ತುಂಬಿದ್ದ ಜನಸಮೂಹಗಳು ಅಂಚೆ-ತಂತಿ ನೌಕರರ ಈ ಹೋರಾಟವನ್ನು ಸ್ವಾಗತಿಸಿದವು, ಬೆಂಬಲಿಸಿದವು. ಭಾರತದ ಕಾರ್ಮಿಕ ವರ್ಗ ಇದು ದೇಶದ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಅವಿಭಾಜ್ಯ ಅಂಗ ಎಂದು ಪರಿಗಣಿಸಿ ಸಕ್ರಿಯವಾಗಿ ಬೆಂಬಲಿಸಿತು. ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಈ

(6ನೇ ಪುಟ ನೋಡಿ)

ಪಕ್ಷದ ಕಾರ್ಯಕ್ರಮ ನಿರೂಪಿಸುವಂತೆ

ನಾವು ಪಡೆದ ಸ್ವಾತಂತ್ರ್ಯದ ಸ್ವರೂಪವೇನು ?

ಸ್ವಾತಂತ್ರ್ಯವನ್ನು ರೂಪಿಸಿದ ಶಕ್ತಿಗಳು

1. ಜಗತ್ತಿನ ಶಕ್ತಿ ಸಮತೋಲನದಲ್ಲಿ ಬದಲಾವಣೆ: ಎರಡನೆಯ ಮಹಾಯುದ್ಧದಲ್ಲಿ ಹಿಟ್ಲರ್‌ನ ಜರ್ಮನಿ ಹಾಗೂ ಇತರ ಫ್ಯಾಸಿಸ್ಟ್ ಶಕ್ತಿಗಳು ಸೋಲನ್ನಪ್ಪಿದ್ದು, ಸೋವಿಯತ್ ಒಕ್ಕೂಟ ಈ ಯುದ್ಧದಲ್ಲಿ ವಹಿಸಿದ ನಿರ್ಣಾಯಕ ಪಾತ್ರ ಇವು ಜಗತ್ತಿನ ವರ್ಗಶಕ್ತಿಗಳ ಸಮತೋಲನವನ್ನು ಸಮಾಜವಾದದ ಪರವಾಗಿ ಗಮನಾರ್ಹವಾಗಿ ಬದಲು ಮಾಡಿದುವು.

2. ಜಾಗತಿಕ ಸಾಮ್ರಾಜ್ಯಶಾಹಿ ದುರ್ಬಲಗೊಂಡಿತು : ಜರ್ಮನಿ, ಇಟಲಿ, ಜಪಾನ್ ಮೊದಲಾದ ಯುದ್ಧಕೋರ ಫ್ಯಾಸಿಸ್ಟ್ ಶಕ್ತಿಗಳು ಬಹಳ ಕಾಲ ತಲೆಯೆತ್ತದಂತಾಯಿತು. ಮಾತ್ರವಲ್ಲ ಜಾಗತಿಕ ಮಟ್ಟದಲ್ಲಿ ಎಲ್ಲ ಸಾಮ್ರಾಜ್ಯಶಾಹಿಗಳು ದುರ್ಬಲಗೊಂಡವು.

3. ಸಮಾಜವಾದಿ ಶಿಬಿರದ ನಿರ್ಮಾಣ : ಹೀಗೆ ದುರ್ಬಲಗೊಂಡ ಸಾಮ್ರಾಜ್ಯಶಾಹಿ ಪೂರ್ವ ಯೂರೋಪಿನ ಅನೇಕ ದೇಶಗಳಲ್ಲಿ ಕಾರ್ಮಿಕ ನಾಯಕತ್ವದ ಜನತಾ ಪ್ರಜಾಪ್ರಭುತ್ವ ದೇಶಗಳು ಉದಯವಾಗುವುದನ್ನು ಸ್ವಲ್ಪವೂ ತಡೆಯಲಾಗಲಿಲ್ಲ. ಇದರಿಂದಾಗಿ ಸೋವಿಯತ್ ದೇಶದ ನೇತೃತ್ವದಲ್ಲಿ ಒಂದು ಸಮಾಜವಾದಿ ಶಿಬಿರದ ನಿರ್ಮಾಣವಾಯಿತು.

4. ರಾಷ್ಟ್ರೀಯ ವಿಮೋಚನಾ ಹೋರಾಟಗಳ ಅಲೆ : ಸಮಾಜವಾದದ ಈ ಗೆಲುವಿನಿಂದ, ಜಗತ್ತನ್ನು ತನ್ನ ಮುಷ್ಟಿಯಲ್ಲಿ ಹಿಡಿದಿದ್ದ ಸಾಮ್ರಾಜ್ಯಶಾಹಿಯ ಸೋಲಿನಿಂದ ಈ ಸಾಮ್ರಾಜ್ಯಶಾಹಿ ದೇಶಗಳ ದಬ್ಬಾಳಿಕೆ ಆಡಳಿತದಡಿ ನಲುಗಿ ಹೋಗಿದ್ದ ಏಷ್ಯಾದ ದೇಶಗಳಲ್ಲಿ ರಾಷ್ಟ್ರೀಯ ವಿಮೋಚನಾ ಹೋರಾಟಗಳು ಹಬ್ಬಿ ಹರಡಿದುವು.

5. ಭಾರತದಲ್ಲಿ ಕ್ರಾಂತಿಕಾರಿ ಹೋರಾಟದ ಅಲೆ : ಈ ವಿಮೋಚನಾ ಹೋರಾಟಗಳ ಭಾಗವಾಗಿ ಭಾರತದಲ್ಲಿಯೂ ಬ್ರಿಟೀಷರ ಆಳ್ವಿಕೆಯ ವಿರುದ್ಧ ರೈತರ ದಂಗೆಗಳು, ಕಾರ್ಮಿಕರ ಸಾರ್ವತ್ರಿಕ ಮುಷ್ಕರಗಳು, ವಿದ್ಯಾರ್ಥಿ ಮುಷ್ಕರಗಳು, ಆಶ್ರಿತ ಸಂಸ್ಥಾನಗಳ (ರಾಜರುಗಳ ಆಡಳಿತದಲ್ಲಿದ್ದ ಮೈಸೂರು ಮೊದಲಾದವು) ಜನತೆಯ ಸಾಮೂಹಿಕ ಹೋರಾಟಗಳು ಬೆಳೆದುವು, ಸೈನ್ಯ ನೌಕಾಪಡೆಗಳ ಅನೇಕ ಕಡೆಗಳಲ್ಲಿ ದಂಗೆಯೆದ್ದವು.

ಬ್ರಿಟಿಷ್ ಮತ್ತು ಕಾಂಗ್ರೆಸ್ ನಡುವಿನ ಒಪ್ಪಂದ

1. ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಅರಿವು ಮೂಡಿತು : ಹೀಗೆ ಹೋರಾಟದ ಪ್ರವಾಹವು ಉಕ್ಕೇರಿ ಬಂದಾಗ ಈ ಹೋರಾಟಗಳು ಇಡೀ ದೇಶವ್ಯಾಪಿ ದಂಗೆಯಾಗಿ ಬೆಳೆಯುವ ಸ್ಥಿತಿ ಬಂದಾಗ ನಮ್ಮ ದೇಶದಲ್ಲಿ ತನ್ನ ಆಳ್ವಿಕೆಯನ್ನು ಮುಂದುವರಿಸಲು ಸಾಧ್ಯವಿಲ್ಲವೆಂಬುದು ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಅರಿವಾಯಿತು.

2. ಕಾಂಗ್ರೆಸ್‌ನ ಭಯ : ಈ ಹೋರಾಟದ ಅಲೆಗಳು ಹಬ್ಬಿ ಎಲ್ಲಾ ಕಡೆಯೂ ದಂಗೆಯಾದರೆ ಸ್ವಾತಂತ್ರ್ಯ ಚಳುವಳಿಯ ಮೇಲೆ ಕಾಂಗ್ರೆಸ್ ಗಿದ್ದ ಹಿಡಿತ ಅದರ ಕೈಜಾರಿ ಹೋಗಬಹುದೆಂಬ ಭಯ ಕಾಂಗ್ರೆಸ್‌ನ ನಾಯಕರಲ್ಲಿ ಮೂಡಿತು.

3. ಒಪ್ಪಂದ : ಈ ಸನ್ನಿವೇಶದಲ್ಲಿ ಒಂದು ಕಡೆ ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಮತ್ತೊಂದು ಕಡೆ ಕಾಂಗ್ರೆಸ್ ಹಾಗೂ ಮುಸ್ಲಿಂಲೀಗ್ ನಾಯಕರ ನಡುವೆ ಒಂದು ಒಪ್ಪಂದವಾಯಿತು.

ಭಾರತದಲ್ಲಿ ಬ್ರಿಟಿಷರ ಆಡಳಿತಕ್ಕೆ ಕೊನೆ

ಈ ಒಪ್ಪಂದದ ಪರಿಣಾಮವಾಗಿ, ನಮ್ಮ ದೇಶವನ್ನು ಭಾರತ, ಪಾಕಿಸ್ತಾನಗಳೆಂದು ವಿಭಜಿಸಿ, ಭಾರತದಲ್ಲಿ 1947 ರ ಆಗಸ್ಟ್ 15 ರಂದು ಕಾಂಗ್ರೆಸ್‌ನ ನಾಯಕರ ಕೈಗೆ ರಾಜಕೀಯ ಅಧಿಕಾರವನ್ನು ವರ್ಗಾಯಿಸಿತು.

(6ನೇ ಪುಟ ನೋಡಿ)

ನಾವು ಪಡೆದ ಸ್ವಾತಂತ್ರ್ಯದ ಸ್ವರೂಪವೇನು ?

(5ನೇ ಪುಟದಿಂದ)

ಭಾರತದಲ್ಲಿ ಭಾರತದ ಹಿರಿ ಬಂಡವಾಳಶಾಹಿಯ ನಾಯಕತ್ವದ ಪ್ರಭುತ್ವ ಸ್ಥಾಪನೆಯಾಯಿತು. ಇದರೊಂದಿಗೆ ಭಾರತದ ಕ್ರಾಂತಿಯ ಮೊದಲನೆ ಹಂತ, ಮುಖ್ಯವಾಗಿ ವಿದೇಶಿಯರ ಆಡಳಿತದ ವಿರುದ್ಧ ಹೋರಾಡಲು ರೂಪಿಸಿಕೊಂಡ ಎಲ್ಲರೂ ಸೇರಿದ ರಾಷ್ಟ್ರೀಯ ಸಂಯುಕ್ತ ರಂಗದ ಹಂತ ಕೊನೆಗೊಂಡಿತು.

ಸಾಮ್ರಾಜ್ಯಶಾಹಿಯೊಂದಿಗೆ–ಪಾಳೆಯಗಾರಿಯೊಂದಿಗೆ ರಾಜಿ

ಸ್ವಾತಂತ್ರ್ಯದ ನಂತರ ಆದದ್ದೇನು ? ಬ್ರಿಟಿಷರ ಆಳ್ವಿಕೆಯ ವಿರುದ್ಧ ನಡೆದ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ್ದು, ಕಾರ್ಮಿಕ ವರ್ಗ, ರೈತಾಪಿ ಜನ, ಮಧ್ಯಮ ವರ್ಗ ಮತ್ತು ಪ್ರಗತಿ ಪರ ಬುದ್ಧಿ ಜೀವಿಗಳೇ ಆದರೂ, ಈ ಹೋರಾಟದ ಬೇಗೆಯಲ್ಲಿ ಬೆಂದವರು ಇವರೇ ಆದರೂ, ಹೋರಾಟದ ನಾಯಕತ್ವ ಬಂಡವಾಳಗಾರರದೇ ಆಗಿತ್ತು. ಜಗತ್ತಿನ ಯಾವುದೇ ಪ್ರಜಾಪ್ರಭುತ್ವ ಕ್ರಾಂತಿಯ ಫಲವಾಗಿ ಮಾಡಬಹುದಾಗಿದ್ದ ಮೂಲ ಭೂತ ಕರ್ತವ್ಯಗಳನ್ನು ಸಂಪೂರ್ಣ ಗೊಳಿಸುವುದರಲ್ಲಿ ಈ ಬಂಡವಾಳಗಾರರು ವಿಫಲರಾದರು. ಈ ಕರ್ತವ್ಯಗಳನ್ನು ಸಮಗ್ರವಾಗಿ ನಿರ್ವಹಿಸಿದರೆ ತಮ್ಮ ಸ್ಥಾನಕ್ಕೆ ಚ್ಯುತಿ ಬರುವಂತೆ ಜನ ಸಮುದಾಯದ ಚಳುವಳಿ ಪ್ರಜ್ಞೆ ಬೆಳೆಯುತ್ತದೆಂದು ಹೆದರಿದರು.

ಸಾಮ್ರಾಜ್ಯಶಾಹಿಯೊಂದಿಗೆ ರಾಜಿ : ಇದರಿಂದಾಗಿ ಒಂದು ಕಡೆ, ಬ್ರಿಟಿಷರ ಹಣ, ಬಂಡವಾಳ ನಮ್ಮ ದೇಶದಲ್ಲಿ ಪ್ಲಾಂಟೇಷನ್‌ಗಳು, ಕೈಗಾರಿಕೆ, ಗಣಿಗಳು ಇತ್ಯಾದಿಗಳಲ್ಲಿ ಮಾಡುತ್ತಿದ್ದ ಲಾಭದ ಸೂರೆಯನ್ನು ಮುಂದುವರೆಸಲು ಅವಕಾಶ ಮಾಡಿಕೊಟ್ಟರು. ಬ್ರಿಟಿಷರ ದಾಸ್ಯದಲ್ಲಿ ಭಾರತ ಒದ್ದಾಡಿದ ನೆನಪಿಗೆ ಎಂಬಂತೆ ವಸಾಹತು ಶಾಹಿ ಪಳೆಯುಳಿಕೆಯಾದ ಬ್ರಿಟಿಷ್ ಕಾಮನ್‌ವೆಲ್ತ್‌ನ ಸದಸ್ಯರಾಗಲು ಒಪ್ಪಿದರು.

ಪಾಳೆಯಗಾರರೊಂದಿಗೆ ರಾಜಿ : ದೇಶೀಯ ಸಂಸ್ಥಾನಗಳೆಂದು ಹೆಸರಾಗಿದ್ದ ಹಿಂದಿನ ರಾಜರುಗಳು ಆಳುತ್ತಿದ್ದ ರಾಜ್ಯಗಳಲ್ಲಿ ಜನಸಮುದಾಯದ ಚಳುವಳಿ ಬೆಳೆದು ಬಂದಿದ್ದವು. ಇದನ್ನು ಪಯೋಗ ಮಾಡಿ ಪಾಳೆಯಗಾರಿಕೆಯನ್ನು ಸಂಪೂರ್ಣವಾಗಿ ಮೂಲೋಚ್ಛಾಟನೆ ಮಾಡುವುದಕ್ಕೆ ಬದಲಾಗಿ ತಮ್ಮ ಬಂಡವಾಳಶಾಹಿ ಶೋಷಣೆಗೆ ಅವರ ಬೆಂಬಲವನ್ನು ಗಳಿಸಲು ಅವರಿಗೆ ಅಪರಿಮಿತ ಸವಲತ್ತುಗಳನ್ನು ನೀಡಲಾಯಿತು. ಬ್ರಿಟಿಷರ ಬಾಲಬಡುಕರಾಗಿದ್ದ ಜಮೀನ್ದಾರರನ್ನು ಕಾಂಗ್ರೆಸ್ ಪಕ್ಷದೊಳಕ್ಕೆ ಸ್ವಾಗತಿಸಲಾಯಿತು, ಜನ ಸಮುದಾಯವನ್ನು ಹತ್ತಿಕ್ಕುವ, ದಮನ ಮಾಡುವ ಸಾಧನವಾಗಿ ತರಬೇತಿಗೊಳಿಸಿದ್ದ ಅಧಿಕಾರಿ ಶಾಹಿಯನ್ನು ಹಾಗೆಯೇ ಉಳಿಸಿಕೊಳ್ಳಲಾಯಿತು. ಪ್ರಜಾಸತ್ತಾತ್ಮಕ ಕ್ರಾಂತಿ ಬೆಳೆದು ಬಲಗೊಳ್ಳಲು ಬಿಡಲಿಲ್ಲ. ಈ ಕ್ರಾಂತಿಯ ಮೂಲಭೂತ ಕರ್ತವ್ಯಗಳಿಂದ ಪಾಳೆಯಗಾರಿಯ ನಾಶ, ಕೃಷಿ ಕಾರ್ಮಿಕರು, ರೈತರಿಗೆ ಭೂಮಿಯನ್ನು ಮುಫತ್ತಾಗಿ ಹಂಚುವುದು, ಬ್ರಿಟಿಷರ ಬಂಡವಾಳವನ್ನು ಮುಟ್ಟುಗೋಲು ಹಾಕಿಕೊಂಡು ಅವರ ಎಲ್ಲಾ ಕೈಗಾರಿಕೆಗಳನ್ನು ರಾಷ್ಟ್ರೀಕರಿಸುವುದು ಮೊದಲಾದವನ್ನು ಪೂರ್ಣಗೊಳಿಸಲಿಲ್ಲ.

ಜನತೆಯ ಕ್ರಿಯಾ ಶಕ್ತಿಯ ಪ್ರವಾಹಕ್ಕೆ ಅವಕಾಶವಾಗುವುದೆಂದು; ಬಡತನ ಹಸಿವು ದಾರಿದ್ರ್ಯಗಳು ನೀಗುವುದೆಂದು ಜನ ಆಶಿಸಿದ್ದರು. ಅವರ ಎಲ್ಲಾ ನಿರೀಕ್ಷೆಗಳು ಸುಳ್ಳಾಗಿವೆ.

ನೂತನ ಶಿಕ್ಷಣ ನೀತಿ ವಿರುದ್ಧ ರಾಜ್ಯವ್ಯಾಪಿ ಪ್ರತಿಭಟನೆ

ನೂತನ ಶಿಕ್ಷಣ ನೀತಿ ವಿರೋಧಿಸಿ ಜುಲೈ 25 ರಂದು ರಾಜ್ಯವ್ಯಾಪ್ತಿ ಪ್ರತಿಭಟನಾ ದಿನಾಚರಣೆಯನ್ನು ಆಚರಿಸಲು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್ ಎಫ್ ಐ) ಕರ್ನಾಟಕ ರಾಜ್ಯ ಸಮಿತಿ "ಶಿಕ್ಷಣ ರಕ್ಷಿಸಿ ಭಾರತ ಉಳಿಸಿ" ಘೋಷಣೆ ಮುಂದಿಟ್ಟು ನೀಡಿದ ಕರೆಯಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕಾರ್ಯಕ್ರಮ ಯಶಸ್ವಿಯಾಗಿರುವ ವರದಿಯನ್ನು ಪ್ರಕಟಿಸುತ್ತಿದ್ದೇವೆ. ಶಿಕ್ಷಣ ನೀತಿಯ ಕುರಿತು ಜನಜಾಗೃತಿ ಆಂದೋಳನವನ್ನುಂಟು ಮಾಡುವಲ್ಲಿ ಶ್ರಮಿಸಿದ ಎಲ್ಲಾ ಶಾಖೆಗಳಿಗೂ ರಾಜ್ಯ ಸಮಿತಿ ಅಭಿನಂದಿಸಿದೆ.

ಕೋಲಾರ : ಶಿಕ್ಷಣವನ್ನು ಶ್ರೀಮಂತರಿಗಷ್ಟೇ ಸೀಮಿತಗೊಳಿಸಲು ಕೇಂದ್ರ ಸರ್ಕಾರ ಮಂಡಿಸಿರುವ ನೂತನ ಶಿಕ್ಷಣ ನೀತಿಯನ್ನು ಪ್ರತಿಭಟಿಸಿ ಜುಲೈ 26 ರಂದು ಮುಳಬಾಗಲು ಬಸ್ ಸ್ಟಾಂಡಿನಿಂದ ವಿದ್ಯಾರ್ಥಿಗಳ ಮೆರವಣಿಗೆ ನಡೆಸಿ ಶ್ರೀರಾಮ ಮಂದಿರದಲ್ಲಿ ಬಹಿರಂಗ ಸಭೆ ನಡೆಸಲಾಯಿತು. ಸಭೆಯಲ್ಲಿ ಶಾಸಕರಾದ ಕಾ| ಆರ್. ವೆಂಕಟರಾಮಯ್ಯ. ವಕೀಲರಾದ ಕಾ ಹೆಚ್. ಎನ್. ನಾಗ ಮೋಹನದಾಸ್, ಎಸ್. ಆರ್. ಆರಾಧ್ಯ, ಅವರುಗಳು ಮಾತನಾಡಿದರು. ಎಸ್. ಎಫ್. ಐ. ಜಿಲ್ಲಾ ಅಧ್ಯಕ್ಷ ಎಂ. ಎಸ್. ಆನಂದ್ ಅಧ್ಯಕ್ಷತೆ ವಹಿಸಿದ್ದರು. ಕಾ| ಜಿ. ಸಿ. ಬೈಯಾರೆಡ್ಡಿ ಸ್ವಾಗತಿಸಿ ಕಾ|| ಶಿವಶಂಕರಪ್ಪ ವಂದನಾರ್ಪಣೆಯೊಡನೆ ಸಭೆ ಮುಕ್ತಾಯವಾಯಿತು.

ಬಾಗೇಪಲ್ಲಿಯಲ್ಲಿ ಜುಲೈ 25 ರಂದು ಬಾಗೇ ಪಲ್ಲಿಯಲ್ಲಿ ಶಾಲಾ–ಕಾಲೇಜುಗಳನ್ನು ವಿದ್ಯಾರ್ಥಿಗಳು ಬಹಿಷ್ಕರಿಸಿ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

ಉ. ಕನ್ನಡ ಜಿಲ್ಲೆ : ಶಿಕ್ಷಣ ನೀತಿ ಕುರಿತು ಶಿರಸಿಯಲ್ಲಿ ಗೋಡೆ ಬರಹ, ಕರಪತ್ರಗಳನ್ನು ಶಾಲಾ–ಕಾಲೇಜುಗಳಲ್ಲಿ ವಿತ್ತರಿಸಿ ವಿದ್ಯಾರ್ಥಿ–ಅಧ್ಯಾಪಕರಲ್ಲಿ ವ್ಯಾಪಕ ಪ್ರಚಾರ ನಡೆಸಿ ತರಗತಿಗಳಲ್ಲಿ ಶಿಕ್ಷಣ ನೀತಿ ಕುರಿತು ಸಭೆಗಳನ್ನು ನಡೆಸಲಾಗಿದೆ. ಕೇಂದ್ರ ಸರ್ಕಾರಕ್ಕೆ ತಂತಿ ಸಂದೇಶ ಕಳುಹಿಸಲಾಗಿದೆ.

ಚಿತ್ರದುರ್ಗ : ಜುಲೈ 25 ರಂದು ಪಿ. ವಿ. ಕೆ. ಸಿ. ಸ್ಕೂಲ್‌ನ ಸಭಾಂಗಣದಲ್ಲಿ ನೂತನ ಶಿಕ್ಷಣ ನೀತಿ ವಿರೋಧಿಸಿ ವಿಚಾರ ಸಂಕೀರಣವನ್ನು ಏರ್ಪಡಿಸಲಾಗಿತ್ತು. ವಿಚಾರ ಸಂಕಿರಣದಲ್ಲಿ ಜಿಲ್ಲಾ ಸಮಿತಿ ಸದಸ್ಯರಾದ ಕಾ|| ಎಸ್.ಬಸವರಾಜರವರು ಶಿಕ್ಷಣ ನೀತಿಯ ಲೋಪದೋಷಗಳ ಕುರಿತು ಮಾತನಾಡಿ ಇದರ ವಿರುದ್ಧ ವಿದ್ಯಾರ್ಥಿಗಳು ಎಚ್ಚರಿಕೆ ವಹಿಸಲು ಕರೆ ನೀಡಿದರು.

ಬೀದರ್ : ಜುಲೈ 25 ರಂದು ಎಸ್. ಎಫ್. ಐ. ಬೀದರ ಶಾಖೆಯ ಆಶ್ರಯದಲ್ಲಿ ಪ್ರತಿಭಟನಾ ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು. ಸುಮಾರು 200 ಮಂದಿ ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಬೀದರ ಶಾಖೆಯ ಕಾರ್ಯದರ್ಶಿ ಕಾ| ರಾಜೇಶ ಸಂಗ್ರಾಮರವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ನಂತರ ಜಿಲ್ಲಾಧಿಕಾರಿಯವರಿಗೆ ಮನವಿ ಪತ್ರ ಅರ್ಪಿಸಿ ಮಾತುಕತೆ ನಡೆಸಲಾಯಿತು.

ಕಾರ್ಮಿಕರ ಹೋರಾಟಗಳು

(5ನೇ ಪುಟದಿಂದ)

ರವನ್ನು ಬೆಂಬಲಿಸಿತು. ಬಂಗಾಳ, ಅಸ್ಸಾಂ, ಮುಂಬೈ ಹಾಗೂ ಮದ್ರಾಸ್‌ಗಳಲ್ಲಿ ಸೌಹಾರ್ದ ಸಾರ್ವತ್ರಿಕ ಮುಷ್ಕರಗಳು ನಡೆದವು. ಜುಲೈ 29 ರಂದು ಕಲ್ಕತ್ತೆಯ ಸ್ಮಾರಕ ಮೈದಾನ ಒಂದು ಅಭೂತಪೂರ್ವ ಕಾರ್ಮಿಕರ ರ್‍ಯಾಲಿಗೆ ಸಾಕ್ಷಿಯಾಯಿತು. ಹಲವಾರು ಸೈನಿಕರೂ ಇದರಲ್ಲಿ ಭಾಗವಹಿಸಿದರು.

ಇಂತಹ ಸನ್ನಿವೇಶದಲ್ಲಿ ಕಾಂಗ್ರೆಸ್ ಮುಖಂಡರು ಯಾವ ನಿಲುವು ತಳೆದರು ಎಂಬುದು ಗಮನಾರ್ಹ. ಸಾಮ್ರಾಜ್ಯಶಾಹಿ–ವಿರೋಧಿ ಹೋರಾಟದ ಮುಖಂಡತ್ವದಲ್ಲಿದ್ದ ಆ ಪಕ್ಷ ಸಾಮ್ರಾಜ್ಯಶಾಹಿ ಶೋಷಣೆಯ ವಿರುದ್ಧ ಹೋರಾಟಕ್ಕೆ ಯಾವ ರೀತಿಯ ಸಾರ್ವಜನಿಕ ಬೆಂಬಲವನ್ನೂ ಸೂಚಿಸಲಿಲ್ಲ. ಜನತೆಯ ಒತ್ತಡದಿಂದಾಗಿ ಜವಹರಲಾಲ್ ನೆಹರು, ಒಂದು ಹೇಳಿಕೆ ನೀಡಿದರೂ ಅದರಲ್ಲಿ ಕಡಿಮೆ ಸಂಬಳದ ಈ ನೌಕರರ ಪ್ರಾಮಾಣಿಕತೆ ಹಾಗೂ ದಕ್ಷತೆಯ ಬಗ್ಗೆ ಸಹಾನುಭೂತಿಯಿತ್ತೆ ಹೊರತು ಅವರ ಹೋರಾಟಕ್ಕೆ ಬೆಂಬಲವಾಗಿ ಚಕಾರವೂ ಇರಲಿಲ್ಲ. ಕೇಂದ್ರಿಯ ಅಸೆಂಬ್ಲಿಯಲ್ಲಿ ಕಾಂಗ್ರೆಸ್ ಸಚೇತರಂತೂ, ಈ ಮುಷ್ಕರ "ಅವಿವೇಕ"ದ ಕೆಲಸ ಎಂದರು! ಆದರೂ ಕೊನೆಗೂ ಮುಷ್ಕರಗಾರರ 12 ಬೇಡಿಕೆಗಳನ್ನು ಬ್ರಿಟಿಷ್ ಸರಕಾರ ಮನ್ನಿಸಲೇ ಬೇಕಾಯಿತು. ಆಗಸ್ಟ 6 ರಂದು ಮುಷ್ಕರ ಕೊನೆಗೊಂಡಿತು. ಜುಲೈ 29 ರ ಕಲ್ಕತ್ತೆಯ ಚಾರಿತ್ರಿಕ ಸಭೆಯ ನಿರ್ಣಯ ಹೇಳಿದಂತೆ "ಈ ಚಾರಿತ್ರಿಕ ಸಾರ್ವತ್ರಿಕ ಮುಷ್ಕರ ದೇಶದ ಕಾರ್ಮಿಕರ ಆಂದೋಲನದಲ್ಲಿ ಐಕ್ಯತೆ ಹಾಗೂ ಹೋರಾಟ ಮನೋಭಾವನೆಯ ಹೊಸ ಅಧ್ಯಾಯ ಆರಂಭಿಸಿತು". ಈ ಹೋರಾಟದ ಫಲವಾಗಿ ಹಲವಾರು ಸಂಘಗಳಾಗಿ ಹಂಚಿ ಹೋಗಿದ್ದ ಅಂಚೆ–ತಂತಿ ನೌಕರರು ತಮ್ಮೆಲ್ಲಾ ಸಂಘಟನೆಗಳನ್ನು ವಿಲೀನಗೊಳಿಸಿ ಒಂದು ಬೃಹತ್ ಸಂಘಟನೆ ರಚಿಸಲು ನಿರ್ಧರಿಸಿದರು 1946–47ರ ಅವಧಿಯಲ್ಲಿ ಜನ ಸಮೂಹಗಳ ಮುಖ್ಯವಾಗಿ ಕಾರ್ಮಿಕ ವರ್ಗದ ಸಮರಶೀಲ ಸಾಮ್ರಾಜ್ಯಶಾಹಿ–ವಿರೋಧಿ ಉತ್ಸಾಹದ ದ್ಯೋತಕವಾಗುವುದರೊಂದಿಗೆ, ಕಾಂಗ್ರೆಸ್‌ನ ನಿಜ ಮುಖವನ್ನು ಬಯಲಿಗೆಳೆದ ಮುಷ್ಕರವಾಗಿತ್ತು. ●

ಅಲೆಅಲೆಯಾಗಿ ಮೇಲೆದ್ದ ರೈತ ಹೋರಾಟಗಳು

5ನೇ ಪುಟದಿಂದ

ಆರಂಭವಾದ ಈ ಹೋರಾಟದ ತಕ್ಷಣದ ಪ್ರಶ್ನೆಗಳೆಂದರೆ ಭೂಮಾಲಿಕರ ಅತ್ಯಾಚಾರ, ಬಿಟ್ಟಿ ದುಡಿತ ಹಾಗೂ ನಿಜಾಮನ ಆಳ್ವಿಕೆಯ ಅಂತ್ಯ ಕೆಲವೇ ಹಳ್ಳಿಗಳಲ್ಲಿ ಆರಂಭವಾದ ಈ ಹೋರಾಟ ಕೆಲವೇ ವಾರಗಳಲ್ಲಿ ನೂರಾರು ಹಳ್ಳಿಗಳಿಗೆ ವ್ಯಾಪಿಸಿತು. ಒಂದು ಹಂತದಲ್ಲಿ ಸುಮಾರು 300 ಹಳ್ಳಿಗಳಲ್ಲಿ 30 ಲಕ್ಷ ಜನತೆ ಹೋರಾಟದ ಗ್ರಾಮರಾಜ್ಯ ಆಳ್ವಿಕೆಗೆ ಬಂದಿದ್ದರು. ಸರಕಾರದ ಹಾಗೂ ಭೂಮಾಲಿಕರ ಬಂಜರು ಭೂಮಿಯನ್ನು ಕಸಿದುಕೊಳ್ಳಲು, ಧಾನ್ಯಗಳ ಕಳ್ಳ ದಾಸ್ತನನ್ನು ವಶಪಡಿಸಿಕೊಂಡು ಅಗತ್ಯವುಳ್ಳವರಿಗೆ ಹಂಚಲು ಹಾಗೂ ಭೂಮಾಲಿಕರ ಮತ್ತು ಲೇವಾದೇವಿಗಾರರ ದಾಖಲೆಗಳನ್ನು ಸುಡಲು ಹಾಗೂ ಜಮೀನಿನ ಮೇಲೆ ಮಿತಿ ಹೇರಲು ಕರೆ ನೀಡಲಾಯಿತು. ರಜಾಕಾರರ ಭಯೋತ್ಪಾದನೆಯನ್ನು ಎದುರಿಸಲು ಗೆರಿಲ್ಲಾ ಪಡೆಗಳು ರಚನೆಗೊಂಡವು. 10 ಲಕ್ಷ ಎಕರೆ ಜಮೀನನ್ನು ಭೂಹೀನರಿಗೆ ಮರು ಹಂಚಲಾಯಿತು. ಈ ಧೀರ ಹೋರಾಟ ಸ್ವಾತಂತ್ರ್ಯ ನಂತರವೂ ಮುಂದುವರೆಯಿತು. ನಿಜಾಮನ ಆಳ್ವಿಕೆ ಕ್ರಾಂತಿಕಾರಿಗಳಿಂದ ಅಂತ್ಯಗೊಳ್ಳುವುದನ್ನು ತಡೆಯಲು ಭಾರತೀಯ ಸೇನೆಯನ್ನು ಕಳುಹಿಸಲಾಯಿತು, ಸೇನೆ ಹೇಗೆ ನಿಜಾಮನ ಆಳ್ವಿಕೆಯನ್ನು ಅಂತ್ಯಗೊಳಿಸುವುದಕ್ಕಿಂತ ಹೆಚ್ಚಾಗಿ ಊಳಿಗಮಾನ್ಯ ಭೂಸಂಬಂಧಗಳಿಗೆ ಜನತೆಯ ಪ್ರತಿರೋಧವನ್ನು ಮುರಿಯಲು ಯತ್ನಿಸಿತು ಎಂಬುದು ಈಗ ಇತಿಹಾಸಕ್ಕೆ ಸೇರಿದ ಅಂಶ. ಇಲ್ಲಿಯೂ ಕಾಂಗ್ರೆಸ್ ಆಳರಸರು ಜನ ಸಮೂಹದ ಇನ್ನೊಂದು ವಿಭಾಗಕ್ಕೆ ಮಾಡಿದ ವಿಶ್ವಾಸಘಾತ ಗಮನಾರ್ಹ.

ಅಂತರರಾಷ್ಟ್ರೀಯ

ನಿಕಾರಾಗುವಾ ಕ್ರಾಂತಿಯ ಏಳನೇ ವಾರ್ಷಿಕೋತ್ಸವ

"ಹೋರಾಟ, ನೇಗಿಲು ಮತ್ತು ಪುಸ್ತಕ"

ದಕ್ಷಿಣ ಅಮೇರಿಕದ ಪನಾಮಾ ಕಾಲುವೆಯಿಂದ ತುಸು ಉತ್ತರಕ್ಕೆ ಕೋಸ್ಟಾರಿಕಾ, ಎಲ್‌ಸಾಲ್ವದೋರ್ ಮತ್ತು ಹೊಂಡುರಾಸ್ ರಾಷ್ಟ್ರಗಳ ಮಧ್ಯದಲ್ಲಿರುವ ಪುಟ್ಟ ರಾಷ್ಟ್ರ ನಿಕರಾಗುವಾ. ಈ ದೇಶದ ರಾಜಧಾನಿ ಮನಾಗುವಾ. ದೇಶದಲ್ಲಿ ಅಧಿಕ ಸಂಖ್ಯೆಯ ಜನ ಆಡುವ ಭಾಷೆ ಸ್ಪಾನಿಷ್, ಮುಖ್ಯ ಉದ್ಯೋಗ ಕೃಷಿ ಮತ್ತು ಹೆಚ್ಚಿನ ಜನ ರೋಮನ್ ಕ್ಯಾಥೋಲಿಕ್ ಮತಾವಲಂಬಿಗಳು. ಶತಮಾನಗಳ ಕಾಲ ಸ್ಪೆಯಿನ್ ದೇಶದ ವಸಾಹತುವಾಗಿದ್ದ ಈ ರಾಷ್ಟ್ರ ಆ ಬಳಿಕ ಅಮೇರಿಕ ಸಂಯುಕ್ತ ಸಂಸ್ಥಾನಗಳ ನವ ವಸಾಹತುವಾಗಿ ಉಳಿದಿತ್ತು. ಹಲವಾರು ದಶಕಗಳ ಕಾಲ ಅಮೇರಿಕ ಸಂಯುಕ್ತ ಸಂಸ್ಥಾನದ ಏಜೆಂಟನಾಗಿದ್ದ ಸೊಮೊರ್ಝಾ ಮತ್ತು ಆತನ ಕುಟುಂಬದ ಜನ ನಿಕರಾಗುವಾದ ಕೃಷಿಕ ಜನತೆಯನ್ನು ಶೋಷಿಸಿ ಅಮೇರಿಕದ ಬೊಕ್ಕಸ ತುಂಬಿಸುತಿದ್ದುದಲ್ಲದೆ ತಾವೂ ಕೊಬ್ಬಿದ್ದರು.

ಇಂತಹ ಪುಟ್ಟ ರಾಷ್ಟ್ರದ ಜನತೆ ತಮ್ಮ ರಾಷ್ಟ್ರೀಯ ಹುತಾತ್ಮ ಸಾಂಡಿನಿಸ್ಟಾನ ಹೆಸರಲ್ಲಿ ಸಾಂಡಿನಿಸ್ಟಾ ರಾಷ್ಟ್ರೀಯ ವಿಮೋಚನಾ ರಂಗವೆಂಬ ಹಲವು ರಾಜಕೀಯ ಪಕ್ಷಗಳ ಸಂಯುಕ್ತ ರಂಗದ ನೇತೃತ್ವದಲ್ಲಿ ಜುಲೈ 19, 1979 ರಂದು ಕ್ರಾಂತಿ ನಡೆಸಿ ವಿದೇಶೀ ಶೋಷಣೆಗೆ ಮುಕ್ತಾಯ ಹಾಡಲು ಮುಂದಾದರು. ಸೊಮೋರ್ಝಾ ಕುಟುಂಬದ ನಿರಂಕುಶಾಧಿಕಾರವನ್ನು ಕೊನೆಗೊಳಿಸಿ ಸ್ವಾತಂತ್ರ್ಯ ಪಡೆದರು.

ಈ ಕ್ರಾಂತಿ ನಡೆದಾಗ ನಿಕರಾಗುವಾದ ಆರ್ಥಿಕತೆ ನುಚ್ಚು ನೂರಾಗಿತ್ತು. ಜನತೆಯಲ್ಲಿ ಶೇಕಡಾ 52 ರಷ್ಟು ಮಂದಿಗೆ ಓದು ಬರಹವೇ ಗೊತ್ತಿರಲಿಲ್ಲ. ಪ್ರಾಥಮಿಕ ಶಾಲೆಗಳು ಆಸ್ಪತ್ರೆಗಳಾಗಲೀ ಇದ್ದಿರಲೀ ಇಲ್ಲವೆನ್ನಬಹುದು. ಹುಟ್ಟಿದ ಪ್ರತಿ ಸಾವಿರ ಮಕ್ಕಳಲ್ಲಿ 270 ಕ್ಕೂ ಹೆಚ್ಚಿನ ಮಕ್ಕಳು ಒಂದು ವರ್ಷದೊಳಗೇ ಅಸು ನೀಗುತಿದ್ದವು. ಸೋಮೋಝಾ ಮತ್ತು ಆತನ ಕುಟುಂಬದ ಮಂದಿ ನಿಕರಾಗುವಾವನ್ನು ದಟ್ಟ ದಾರಿದ್ರ್ಯದ ಅಂಚಿಗೆ ತಳ್ಳಿದ್ದರು.

ಸಾಂಡಿನಿಸ್ಟಾ ರಂಗ ಈ ದೇಶವನ್ನು ಮರಳಿ ಆರಂಭದಿಂದಲೇ ಕಟ್ಟ ಬೇಕಾಗಿತ್ತು. ಪ್ರಾಥಮಿಕ ಶಾಲೆಗಳು, ಪ್ರೌಢ ಶಿಕ್ಷಣಕ್ಕಾಗಿ ವ್ಯವಸ್ಥೆ, ಜನತೆಗೆ ಮನೆ ಮತ್ತು ಆಸ್ಪತ್ರೆಗಳನ್ನು ಹೊಸದಾಗಿ ಕಟ್ಟ ಬೇಕಾಯಿತು. ವ್ಯವಸಾಯ ಕ್ಷೇತ್ರವನ್ನು ಪುನರ್ಸಂಘಟಿಸಿ ಉಳುದವನಿಗೇ ಹೊಲ ನೀಡಲಾಯಿತು. ಹೊಸ ಕಾರ್ಖಾನೆ ಮತ್ತು ಕೈಗಾರಿಕೆಗಳು ತೆರೆಯಲ್ಪಟ್ಟವು. ಸಾಮಾಜಿಕ ಜೀವನದ ಪ್ರಜಾ ತಾಂತ್ರೀಕರಣವನ್ನು ಕೈಗೊಳ್ಳಲಾಯಿತು,

ನಿರಕ್ಷರತೆಯನ್ನು ತೊಡೆದುಹಾಕಲು ಸಾಂಡಿನಿಸ್ಟಾ ರಂಗ ಕೈಗೊಂಡ ಕ್ರಮಗಳು ಪರಿಣಾಮಕಾರಿಯಾಗಿವೆ. ಮಕ್ಕಳು, ಹದಿ ಹರೆಯದ ಜನರೊಂದಿಗೆ ಮಧ್ಯಮ ವಯಸ್ಕರಿಗೂ ಹೆಚ್ಚೇಕೆ ವಯಸ್ಸಾದವರಿಗೂ ಅಕ್ಷರ ಜ್ಞಾನ ನೀಡುವ ಕಾರ್ಯಕ್ರಮವನ್ನು 1980 ರಲ್ಲೇ ಕೈಗೊಳ್ಳಲಾಗಿದೆ. ಸ್ಪಾನಿಶ್ ಭಾಷೆಯಲ್ಲೇ ಅಲ್ಲದೆ ಸ್ಥಳೀಯ ಕೆಂಪು ಇಂಡಿಯನ್ನರ ಪ್ರಾದೇಶಿಕ ಭಾಷೆಯಲ್ಲೂ ಶಿಕ್ಷಣ ನೀಡಲಾಗಿದೆ. ಈ ಎಲ್ಲ ಕ್ರಮಗಳ ಪರಿಣಾಮವಾಗಿ ನಿರಕ್ಷರತೆಯ ಪ್ರಮಾಣ ಕೆಲವೇ ವರ್ಷಗಳಲ್ಲಿ ಕೇವಲ ಶೇ. 12 ರಷ್ಟಕ್ಕೆ ಕುಸಿದಿದೆ.

ಹೆಚ್ಚು ಸಂಖ್ಯೆಯಲ್ಲಿ ಆಸ್ಪತ್ರೆಗಳ ನಿರ್ಮಾಣ ಮತ್ತು ಸರಕಾರ ಕೈಗೊಂಡ ವ್ಯಾಪಕ ಆರೋಗ್ಯ ಯೋಜನೆಯ ಪರಿಣಾಮವಾಗಿ ನಿಕರಾಗುವಾವನ್ನು ಸದಾಕಾಲ ಪೀಡಿಸುತಿದ್ದ ಸಿತಾಳೆ ಸಿಡುಬಿನಂತಹ ಸೋಂಕು ರೋಗಗಳನ್ನು ಸಂಪೂರ್ಣ ನಿರ್ಮೂಲ ಮಾಡಲಾಗಿದೆ.

ಸಾಂಡಿನಿಸ್ಟಾ ಸರಕಾರವು ತೀವ್ರ ಸ್ವರೂಪದ ಭೂಸುಧಾರಣೆಯನ್ನು ಜ್ಯಾರಿಗೆ ತಂದು 18 ಲಕ್ಷ ಹೆಕ್ಟೇರಿನಷ್ಟು ಕೃಷಿಯೋಗ್ಯ ಭೂಮಿಯನ್ನು 86,000 ರೈತ ಕುಟುಂಬಗಳಿಗೆ ವಿತರಣೆ ಮಾಡಿದೆ. ಈ ವರ್ಷ ಇನ್ನು 21,205 ಕುಟುಂಬಗಳಿಗೆ ಭೂಮಿ ಸಿಗಲಿದೆ. ಕೆಲವೇ ಮಂದಿ ಖಾಸಗಿ ಭೂಮಾಲಿಕರಿದ್ದರೂ ಹೆಚ್ಚಿನ ಕೃಷಿ ಪ್ರದೇಶವನ್ನು ಎಸ್ಟೇಟುಗಳನ್ನೂ ಸಹಕಾರಿ ಕ್ಷೇತ್ರ ಮತ್ತು ಸಾರ್ವಜನಿಕ ಕ್ಷೇತ್ರ ದೊಳಕ್ಕೆ ತರಲಾಗಿದೆ. ಖಾಸಗಿ ಭೂ ಒಡೆತನವುಳ್ಳವರು ಹೆಚ್ಚಿನ ದಕ್ಷತೆಯಿಂದ ಕೆಲಸ ಮಾಡುತಿದ್ದರೆ ಮತ್ತು ಕ್ರಾಂತಿಯ ಆಶಯಗಳನ್ನು ವಿರೋಧಿಸುವ ಯತ್ನ ಮಾಡದಿದ್ದರೆ ಮಾತ್ರ ಅಂಥವರ ಭೂಮಿಯನ್ನು ಅವರ ಕೈಯಲ್ಲೇ ಉಳಿಯಗೊಡಲಾಗಿದೆ.

ನವಂಬರ್ 1984 ರಲ್ಲಿ ಮೊತ್ತ ಮೊದಲ ಬಾರಿಗೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಆರು ಪಕ್ಷಗಳು ಭಾಗವಹಿಸಿವೆ. ಡೇನಿಯಲ್ ಓರ್ಟೆಗಾ ಈ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಜನತೆಯ ಅಭಿಮತ ಸಂಗ್ರಹಿಸಿ ಹೊಸ ಸಂವಿಧಾನವನ್ನು ರೂಪಿಸಿ ಕೊಳ್ಳಲಾಗಿದೆ. ಬಹು ಪಕ್ಷೀಯ ವ್ಯವಸ್ಥೆಗೆ ಅವಕಾಶ ನೀಡಿರುವ ಈ ಸಂವಿಧಾನ ಸೊಮೊರ್ಝಾ ಕುಟುಂಬದವರನ್ನು ಮರಳಿ ಅಧಿಕಾರಕ್ಕೆ ತರಬೇಕೆಂದಿರುವವರನ್ನು ಬಿಟ್ಟು ಉಳಿದೆಲ್ಲರಿಗೂ ಮುಕ್ತ ರಾಜಕೀಯ ಹಕ್ಕುಗಳನ್ನು ನೀಡಿದೆ.

ನಿಕರಾಗುವಾದ ಕ್ರಾಂತಿಯನ್ನು ವಿಫಲಗೊಳಿಸಲು ಅಮೇರಿಕಾ ಸಂ.ಸಂ. ದಿನನಿತ್ಯ ನಡೆಸುತ್ತಿರುವ ವಿಧ್ವಂಸಕ ಕೃತ್ಯ, ಅಕ್ಕ ಪಕ್ಕದ ಕೊಸ್ಟಾರೀಕ ಮತ್ತು ಹೊಂಡುರಾಸ್‌ನಿಂದ ನಿಕರಾಗುವಾದೊಳಗೆ ನುಗ್ಗಿ ಅನಾಹುತ ವೆಬ್ಬಿಸುತ್ತಿರುವ ಸಿ ಐ ಎ ಬೆಂಬಲಿತ "ಕಾಂಟ್ರಾ"ಗಳ ನಿರಂತರ ಕಿರುಕುಳಗಳ ನಡುವೆ ನಿಕರಾಗುವಾದ ಕ್ರಾಂತಿ ಮುನ್ನಡೆಯುತ್ತಿದೆ. ಸಿ ಐ ಎ 1984 ರಲ್ಲಿ 11,000 "ಕಾಂಟ್ರಾ" ಭಯೋತ್ಪಾದಕರನ್ನು ನಿಕರಾಗುವಾದೊಳಗೆ ಛೂ ಬಿಟ್ಟಿದೆ. ತೀರಾ ಇತ್ತೀಚೆಗೆ ಅಮೇರಿಕದ ಸೆನೆಟ್ ನೂರು ಮಿಲಿಯ ಡಾಲರುಗಳಷ್ಟು ಮೊತ್ತದ ಹಣಕಾಸು ಮತ್ತು ಶಸ್ತ್ರಾಸ್ತ್ರಗಳ ನೆರವನ್ನು "ಕಾಂಟ್ರಾ"ಗಳಿಗೆ ನೀಡುವ ನಿರ್ಧಾರ ಪ್ರಕಟಿಸಿದೆ. ನಿಕರಾಗುವಾದ ಜನತೆ ಈ ಪ್ರತಿಕ್ರಾಂತಿಯ ಯತ್ನಗಳನ್ನು ಅಪಾರ ಬಲಿದಾನ ಮತ್ತು ಹೋರಾಟದ ಮೂಲಕ ವಿಫಲಗೊಳಿಸುತ್ತಿದ್ದಾರೆ. ಬಂದೂಕು, ನೇಗಿಲು ಮತ್ತು ಪಾಠ ಪುಸ್ತಕದ ಮೂಲಕ ನಿಕರಾಗುವಾದ ಜನತೆ ತಮ್ಮ ಕ್ರಾಂತಿಯನ್ನು ಯಶಸ್ಸಿನತ್ತ ಕೊಂಡೊಯ್ಯುತ್ತಿದ್ದಾರೆ.

ನಿಕರಾಗುವಾ ಕ್ರಾಂತಿಯ ಏಳನೇ ವಾರ್ಷಿಕ ದಿನದಂದು ಅಧ್ಯಕ್ಷ ಓರ್ಟೆಗಾ ಹೇಳಿರುವಂತೆ "ನಿಕರಾಗುವಾದ ಜನತೆ ಈ ದೇಶದ ಇತಿಹಾಸದಲ್ಲೇ ಮೊದಲ ಬಾರಿಗೆ ತಾವೇ ತಮ್ಮ ದೇಶದ ಯಜಮಾನರಾಗಿದ್ದಾರೆ. ಅವರು ತಮ್ಮ ಚರಿತ್ರೆಯನ್ನು ತಾವೇ ಬರೆಯುತ್ತಿದ್ದಾರೆ. ಸ್ವಾತಂತ್ರ್ಯವನ್ನು ಕಾಪಾಡಿಕೊಂಡು ಅಭಿವೃದ್ಧಿಯ ಮಾರ್ಗದಲ್ಲಿ ದಾಪುಗಾಲು ಹಾಕುತ್ತಿದ್ದಾರೆ. ಕಳೆದ ನಾಲ್ಕು ವರ್ಷಗಳಲ್ಲಿ ರೀಗನ್ ಆಡಳಿತ ನಮ್ಮನ್ನು ನಿರ್ನಾಮ ಮಾಡಲು ನಡೆದ ಸತತ ಪ್ರಯತ್ನಗಳನ್ನು ವಿರೋಧಿಸಿ ನಾವು ಯಶಸ್ಸು ಗಳಿಸಿದ್ದೇವೆ. ರೀಗನ್ ನಮ್ಮ ವಿಜಯವನ್ನು ನಮ್ಮಿಂದ ಕಸಿದುಕೊಳ್ಳಲಾರ"

ಜುಲೈ 19 ರಂದು ನಡೆಯ ಬೇಕಾಗಿದ್ದ ನಿಕರಾಗುವಾ ಕ್ರಾಂತಿಯ ಏಳನೇ ವಾರ್ಷಿಕೋತ್ಸವ ಸಮಾರಂಭಗಳನ್ನು ಅಮೇರಿಕಾ ಸಂ. ಸಂ. ಇತ್ತೀಚೆಗೆ ತೀವ್ರಗೊಳಿಸಿರುವ ಭಯೋತ್ಪಾದಕ ಚಟುವಟಿಕೆಗಳ ಹಿನ್ನಲೆಯಲ್ಲಿ ನವಂಬರ ತಿಂಗಳಿಗೆ ಮುಂದೂಡಲಾಗಿದೆಯೆಂದು ತಿಳಿದು ಬಂದಿದೆ. ○

ಅಮೇರಿಕಾ-ಬ್ರಿಟನ್‌ಗಳ ದ. ಆಫ್ರಿಕಾ ನೀತಿಯ ಖಂಡನೆ

ಜುಲೈ ಕೊನೆಯ ವಾರದಲ್ಲಿ ಇಥಿಯೋಪಿಯದ ರಾಜಧಾನಿ ಅಡಿಸ್—ಅಬಾಬದಲ್ಲಿ ಜರಗಿದ ಆಫ್ರಿಕ–ಐಕ್ಯತಾ ಸಂಘಟನೆಗೆ ಸೇರಿದ ಐವತ್ತೊಂದು ರಾಷ್ಟ್ರಗಳ ರಾಷ್ಟ್ರ ಪ್ರಮುಖರು ಮತ್ತು ವಿದೇಶಿ ಮಂತ್ರಿಗಳ ಶೃಂಗ ಸಭೆ ದಕ್ಷಿಣ ಆಫ್ರಿಕದ ಮೇಲೆ ಸಂಪೂರ್ಣ ಆರ್ಥಿಕ ದಿಗ್ಬಂಧ ಹೇರಲು ನಿರಾಕರಿಸುತ್ತಿರುವ ಅಮೇರಿಕ ಸಂಯುಕ್ತ ಸಂಸ್ಥಾನ ಮತ್ತು ಬ್ರಿಟನ್‌ನ ನೀತಿಯನ್ನು ತೀವ್ರವಾಗಿ ಖಂಡಿಸಿದೆ. ಆಫ್ರಿಕಾ ಐಕ್ಯತಾ—ಸಂಘಟನೆ (ಒ.ಎ.ಯು.) ಯ ಇಪ್ಪತ್ತೆರಡನೇ ವಾರ್ಷಿಕ ಅಧಿವೇಶನದಲ್ಲಿ ಅಂಗೀಕರಿಸಲಾದ ನಿರ್ಣಯವು ಜುಲೈ 22ರಂದು ಅಮೇರಿಕದ ಅಧ್ಯಕ್ಷ ರೀಗನ್ ದಕ್ಷಿಣ ಆಫ್ರಿಕದ ಮೇಲೆ ದಿಗ್ಬಂಧ ಹೇರಲು ನಿರಾಕರಿಸಿ ನೀಡಿರುವ ಭಾಷಣದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದೆಯಲ್ಲದೆ ರೀಗನ್ ಸರಕಾರ ದಕ್ಷಿಣ ಆಫ್ರಿಕದ ಪಾಶವಿಕ ವರ್ಣಭೇಧ ನೀತಿಗೆ ಬಹಿರಂಗ ಬೆಂಬಲ ನೀಡುತ್ತಿದೆಯೆಂದೂ ಆರೋಪಿಸಿದೆ.

ಪ್ರಿಟೋರಿಯದ ಬೋಥಾ ಆಡಳಿತ ದಿನನಿತ್ಯ ನಡೆಸುತ್ತಿರುವ ಜನಾಂಗ ಹತ್ಯೆ, ಪೋಲೀಸು ಮತ್ತು ಭಯೋತ್ಪಾದಕರ ಮೂಲಕ ಕರಿಯರನ್ನು ಕಗ್ಗೊಲೆ ನಡೆಸುತ್ತಿರುವುದು ಮತ್ತು ಜನತೆಯ ಮೇಲೆ ನಡೆಸಲಾಗುತ್ತಿರುವ ಅತ್ಯಾಚಾರಗಳನ್ನು ಒ.ಎ.ಯು.ಶೃಂಗ ಸಭೆ ಎತ್ತಿ ತೋರಿಸಿದೆ. ದಕ್ಷಿಣ ಆಫ್ರಿಕ ಸರಕಾರದ ಜೊತೆ ಆರ್ಥಿಕ ಸಂಬಂಧಗಳನ್ನು ಇನ್ನೂ ಮುಂದುವರಿಸುತ್ತಿರುವುದಲ್ಲದೆ ಅದರೊಂದಿಗೆ ಅಣ್ವಸ್ತ್ರ ತಂತ್ರಜ್ಞಾನವನ್ನು ಹಂಚಿಕೊಳ್ಳುತ್ತಿರುವ ಪ. ಜರ್ಮನಿ, ಫ್ರಾನ್ಸ್, ಬ್ರಿಟನ್, ಅಮೇರಿಕಾ ಸಂ. ಸಂ. ಮತ್ತು ಇಸ್ರೇಲ್ ಸರಕಾರಗಳ ವರ್ತನೆಯನ್ನು ಒ. ಎ. ಯು. ತೀವ್ರವಾಗಿ ಖಂಡಿಸಿದೆ.

ಅಂಗೋಲಾದಲ್ಲಿರುವ "ಯುನಿಟಾ" ಭಯೋತ್ಪಾದಕರಿಗೆ ರೊನಾಲ್ಡ್ ರೀಗನ್ ಅವರು ಬಹಿರಂಗ ಬೆಂಬಲ ಸಾರುವ ಮೂಲಕ ಅಂಗೋಲಾದ ಮೇಲೆ ಆಕ್ರಮಣಕ್ಕೆ ನೆರವು ನೀಡುತ್ತಿದ್ದಾರೆಂದೂ ಇಡೀ ಆಫ್ರಿಕಾ ಖಂಡದಲ್ಲಿ ಅಸ್ಥಿರತೆಯುಂಟು ಮಾಡುತ್ತಿದ್ದಾರೆಂದೂ ಜಾಂಬಿಯದ ಅಧ್ಯಕ್ಷ ಕೆನೆತ್ ಕೌಂಡಾ ಆರೋಪಿಸಿದ್ದಾರೆ. ○

ಕಾಮನ್ ವೆಲ್ತ್ ಶೃಂಗ–ಬ್ರಿಟನ್ನಿನ ವಿಶ್ವಾಸಘಾತಕತನ

ಭಾರತವೂ ಸೇರಿದಂತೆ ಕಾಮನ್ ವೆಲ್ತ್ ಕೂಟದ ಏಳು ರಾಷ್ಟ್ರಗಳ ಪ್ರಮುಖರ ಮಿನಿ ಶೃಂಗ ಸಭೆ ಲಂಡನ್‌ನಲ್ಲಿ ಜರುಗಿ ವರ್ಣಭೇಧ ನೀತಿ ಅನುಸರಿಸುತ್ತಿರುವ ದ. ಆಫ್ರಿಕದ ವಿರುದ್ಧ ಹೊಸ ಆರ್ಥಿಕ ದಿಗ್ಬಂಧವನ್ನು ಹೇರುವ ನಿರ್ಧಾರ ಕೈಗೊಂಡಿದೆ. ವರ್ಣಭೇದ ನೀತಿಗೆ ಪ್ರತ್ಯಕ್ಷ ಮತ್ತು ಪರೋಕ್ಷ ಬೆಂಬಲ ನೀಡುತ್ತಿರುವ ಬ್ರಿಟನ್ನಿನ ಎಡೆಬಿಡಂಗಿತನ ಈ ಸಮ್ಮೇಳನದಲ್ಲಿ ಜಗಜ್ಜಾಹೀರಾಗಿದೆ.

ಕಳೆದ ಅಕ್ಟೋಬರ್‌ನಲ್ಲಿ ನಡೆದ ಕಾಮನ್‌ವೆಲ್ತ್ ಶೃಂಗ ಸಭೆ ಅಂಗೀಕರಿಸಿದಂತಹ ಆರ್ಥಿಕ ದಿಗ್ಬಂಧಗಳಿಗಿಂತ ಹೆಚ್ಚಾಗಿ ಇನ್ನು ಯಾವುದೇ ಕ್ರಮವನ್ನು ತಾನು ತೆಗೆದುಕೊಳ್ಳಲಾರೆ ಎಂದಿರುವ ಬ್ರಿಟಿಷ್ ಪ್ರಧಾನಿ ಮಾರ್ಗರೇಟ್ ಥ್ಯಾಚರ್ ಆಫ್ರಿಕದ ರಾಷ್ಟ್ರಗಳ ವಿರುದ್ಧ ವಿಶ್ವಾಸಘಾತುಕ ತನದ ಕೃತ್ಯವೆಸಗಿದ್ದಾರೆಂದು ಭಾರತವನ್ನು ಒಳಗೊಂಡಂತೆ ಶೃಂಗ ಸಭೆಯಲ್ಲಿ ಭಾಗವಹಿಸಿದ ಇತರ ಐದು ರಾಷ್ಟ್ರಗಳು ಅಭಿಪ್ರಾಯ ಪಟ್ಟಿವೆ.

ದಕ್ಷಿಣ ಆಫ್ರಿಕದ ಖಾಸಗಿ ವ್ಯಕ್ತಿಗಳಿಗಾಗಲೀ ಸಂಸ್ಥೆಗಳಿಗಾಗಲೀ ಹೊಸ ಸಾಲ ನೀಡುವುದರ ಮೇಲೆ ನಿಷೇಧ, ದಕ್ಷಿಣ ಆಫ್ರಿಕದಿಂದ ಉಕ್ಕು, ಕಬ್ಬಿಣ, ಯುರೇನಿಯಂ ಮತ್ತು ಕಲ್ಲಿದ್ದಲಿನ ಆಮದನ್ನು ನಿಲ್ಲಿಸಿ ಬಿಡುವುದು ಮತ್ತು ದ. ಆಫ್ರಿಕದೊಂದಿಗಿನ ರಾಜತಾಂತ್ರಿಕ ಸಂಬಂಧಗಳನ್ನು ಕಡಿದುಕೊಳ್ಳುವುದು ಇವೇ ಮೊದಲಾದ ಕ್ರಮಗಳನ್ನು ಜಾರಿಗೆ ತರಲು ಲಂಡನ್ ಸಮ್ಮೇಳನ ನಿರ್ಧರಿಸಲಾಗಿದೆ. ಇವರೊಂದಿಗೆ ಕಳೆದ ವರ್ಷ ನಸ್ಸಾವುನಲ್ಲಿ ನಿರ್ಧರಿಸಲಾಗಿರುವ ಎಂಟು ಅಂಶಗಳ ಕ್ರಮವೂ ಮುಂದುವರಿಯುತ್ತದೆ.

ಮಂತ್ರಿ ಮಂಡಲದಲ್ಲಿ ಉಳಿಯಲು ಸಾಧ್ಯವೇ ?

(ಒಂದನೇ ಪುಟದಿಂದ)

ಸ್ಥಾನದ ಪ್ರಭಾವವನ್ನು ಬೀರಿ ಅರ್ಜಿದಾರ ಒಕ್ಕಲುಗಳ ನ್ಯಾಯವಾದ ಹಕ್ಕುಗಳನ್ನು ಅಲ್ಲಗಳೆಯಲಾಗಿದೆ. ಅವರು ಪ್ರತಿವಾದಿಯ ದಬ್ಬಾಳಿಕೆಗೆ ಬಲಿ ಪಶುಗಳಾಗಿದ್ದಾರೆ.

"ಅರ್ಜಿದಾರರು ಒಂದು ನ್ಯಾಕ್‌ವಾಡಿ ಸಂಯುಕ್ತ ಕುಟುಂಬಕ್ಕೆ ಸೇರಿದ್ದು ಪಾಟೀಲರಿಗೆ ರಾಜಕೀಯ ವಿರೋಧಿಗಳಾಗಿದ್ದರು. ಅವರು ಪಾಟೀಲರ ಮತ್ತು ಅವರ ಪತ್ನಿ ಶ್ರೀಮತಿ ಅರುಣದೇವಿಯವರ ಭೂಮಿಯ ಒಕ್ಕಲುಗಳಾಗಿದ್ದರು. ಅವರು ಗೇಣಿದಾರರು ಎಂಬುದನ್ನು ಪಾಟೀಲರೂ ಅವರ ಅಧಿಕೃತ ನಕ್ತಾರರೂ ಭೂ-ನ್ಯಾಯ ಮಂಡಳಿಯ ಮುಂದೆ ಒಪ್ಪಿ ಹೇಳಿಕೆ ಕೊಟ್ಟಿದ್ದರು.

"ಭೂಮಿಯ ಮತ್ತು ಆ ಭೂಮಿಯ" ಗೇಣಿದಾರರ ಕುರಿತು ಭೂ-ನ್ಯಾಯ ಮಂಡಳಿಗೆ ಎಳ್ಳಿನಷ್ಟು ಸಂಶಯಕ್ಕೆ ಎಡೆ ಇಲ್ಲದಿದ್ದಾಗ್ಯೂ ಅರ್ಜಿದಾರರ ಅರ್ಜಿಯನ್ನು ಭೂ-ನ್ಯಾಯ ಮಂಡಳಿ ತಪ್ಪಾಗಿ ವಜಾಮಾಡಿತ್ತು.

"ಭೂ-ನ್ಯಾಯ ಮಂಡಳಿಯವರು ಸಂಬಂಧಪಟ್ಟ ರಿಕಾರ್ಡ್‌ಗಳನ್ನು ಪರಿಶೀಲಿಸಲೇ ಇಲ್ಲ, ಅವುಗಳಲ್ಲಿ ಅರ್ಜಿದಾರರು 1974-78ರಿಂದ ದಕ್ಷಿಣ ಒಕ್ಕಲುಗಳು ಎಂಬ ಹೆಸರಿನಿಂದ ನಮೂದಿಸಲ್ಪಟ್ಟಿತ್ತು. ಸ್ಥಳ ತನಿಖೆಯ ವೇಳೆ ಅರ್ಜಿದಾರರ ಗೈರುಹಾಜರಿಯಲ್ಲಿ ಭೂಮಾಲೀಕ ಇತರ ಕೆಲವರು ಮತ್ತು ಪ್ರತಿವಾದಿಗಳಲ್ಲಿ ಒಬ್ಬರಾದ ಶ್ರೀಮತಿ ಅಕ್ಕುತಾಯಿಯವರು ಕೊಟ್ಟ ಸ್ವಯಂ ಹೇಳಿಕೆಗಳನ್ನು ಪರಿಶೀಲಿಸಿ ಭೂ ನ್ಯಾಯ ಮಂಡಳಿ ಭೂ ಮಾಲೀಕರ ಪರವಾಗಿ ಆಜ್ಞೆ ಹೊರಡಿಸಿತು. ಅರ್ಜಿದಾರರಿಗೆ ನೋಟೀಸು ಕೊಡದೆ ಕೇಸನ್ನು 27-10-1984 ರಿಂದ 30-10-1984ಕ್ಕೆ ಹಾಕಿದುದು, ತಾ. 30-10-1984 ರಂದು ಅರ್ಜಿದಾರರ ಗೈರು ಹಾಜರಿಯನ್ನು ಉಪಯೋಗಿಸಿಕೊಂಡು ಅವಸರ ಅವಸರವಾಗಿ ಕೇಸನ್ನು ಫೈಸಲು ಮಾಡಿದುದನ್ನು ಬಯಲಿಗೆಳೆಯುತ್ತದೆ.

"ಕೋರ್ಟಿನ ಎದುರು ಹಾಜರುಪಡಿಸಿದ ನಿಜ ಸಂಗತಿಗಳ ಆಧಾರದಲ್ಲಿ ಭೂ—ನ್ಯಾಯ ಮಂಡಳಿಯವರು ಈ ವಿವಾದದಲ್ಲಿ ಕಾನೂನು ಪ್ರಕಾರ ಅನುಸರಿಸಬೇಕಾದ ವಿಧಾನಗಳನ್ನು ಅನುಸರಿಸಲಿಲ್ಲವೆಂದು ಬಲವಾದ ಸಂಶಯ ಪಡುವಂತೆ ಮಾಡಿದ್ದಾರೆ.

"ಭೂ—ನ್ಯಾಯ ಮಂಡಳಿಯ ಅಧ್ಯಕ್ಷ ಮತ್ತು ಸದಸ್ಯರು ಒಕ್ಕಲುಗಳಿಗೆ ಸ್ಥಾನತಾ ಹಕ್ಕನ್ನೂ ಕೊಡುವ, ಕಾನೂನು ರಿತ್ಯಾ ವಿಧಾನವನ್ನು ದುರುಪಯೋಗ ಮಾಡಿದ್ದು, ಅರ್ಜೀದಾರರು ತಮ್ಮ ನ್ಯಾಯದ ಕುರಿತು ಧೃಢವಾಗಿ ಹೋರಾಡಲು ಧೈರ್ಯತಳೆಯಲಾರದಾದರು.

"ಇನ್ನೊಂದು ಕೇಸಿನಲ್ಲೂ ಈ ರಾಯಬಾಗ್ ಭೂ—ನ್ಯಾಯ ಮಂಡಳಿಯು ಹೈಕೋರ್ಟಿನಿಂದ ನಿಂದನೆ ಪಡೆದಿತ್ತು. ಆ ಕೇಸಿನಲ್ಲಿ ಶ್ರೀಮಾನ್ ಪಾಟೀಲರ (ಆಗ ಎಂ. ಎಲ್. ಎ. ಆಗಿದ್ದು ಭೂ—ನ್ಯಾಯ ಮಂಡಳಿಯ ಸದಸ್ಯರಾಗಿದ್ದರು) ನಡವಳಿಕೆಯ ಕುರಿತು ಕೋರ್ಟಿನ ಆಪಾದನೆ ಮಾಡಿತ್ತು.

"ಭೂ-ನ್ಯಾಯ ಮಂಡಳಿಯು ಜನವರಿ 27-1984 ರಂದು ಅಷ್ಟು ತಡವಾಗಿ ಶ್ರೀ ಔಗೆಪ್ಪಾ ಎಂಬ ಪ್ರತಿವಾದಿಗೆ ಅರ್ಜೀ ಹಾಕಲು ಬಿಟ್ಟುದು ಒಕ್ಕಲುಗಳನ್ನು "ಕಿರುಕುಳಕ್ಕೆ ಗುರಿಪಡಿಸಿದುದು" ಶ್ರೀ ಪಾಟೀಲರ ಸಂವಿಧಾನಾತೀತ ಅರ್ಥ ಮತ್ತು ಪ್ರಭಾವಕ್ಕೆ ಗುರಿಯಾಗಿ--ತನ್ನ ಅಧಿಕಾರದ ದುರುಪಯೋಗ" ಎಂದು ತೀರ್ಪು ಆಪಾದನೆ ಮಾಡಿದೆ.

ಈ ತೀರ್ಪು ಎಲ್ಲವನ್ನೂ ಸ್ಪಷ್ಟವಾಗಿ ಉಲ್ಲೇಖಿಸಿದೆ. ನಮಗೆ ಏನೂ ಹೇಳಲು ಉಳಿದಿಲ್ಲ.

ನಾವು ಹೇಳುವುದು ಇಷ್ಟೆ ; "ಇಂತಹ ಮಂತ್ರಿಗಳನ್ನಿಟ್ಟುಕೊಂಡು (ಅದೂ ಕ್ಯಾಬಿನೆಟ್ಟಿನಲ್ಲಿ, ಅದೂ ಸತತವಾಗಿ) ಶ್ರೀಮಾನ್ ರಾಮಕೃಷ್ಣ ಹೆಗ್ಡೆಯವರಾಗಲೀ ಅವರ ಜನತಾ ಪಕ್ಷವಾಗಲೀ ಹೇಗೆ ರೈತರಿಗೆ ನ್ಯಾಯ ಕೊಡಲು ಸಾಧ್ಯ ? ಮೊದಲೇ ಜನತಾ ಪಕ್ಷವು ಭೂ ಮಾಲೀಕರ ಪರ ಇರುವ ಪಕ್ಷವೆಂದು ಜನಜನಿತವಾಗಿರುವಾಗ ಇಂತಹವರನ್ನಿಟ್ಟುಕೊಂಡು ರೈತರ ಉದ್ಧಾರ ಹೇಗೆ ಸಾಧ್ಯ ?

"ಮಂತ್ರಿ ಮಂಡಳವನ್ನು ಪುನರ‍್ರಚಿಸುವಾಗಲೂ . ಹೆಗ್ಡೆಯವರು ಇದನ್ನೆಲ್ಲಾ ಗಮನಕ್ಕೆ ತೆಗೆದುಕೊಳ್ಳದೆ ಇದ್ದುದು ರಾಜ್ಯದ ಜನರ ಮನಸ್ಸಿನಲ್ಲಿ ಸಂಶಯ ಹಾಗೂ ಖೇದವನ್ನುಂಟು ಮಾಡಿದೆ ಎಂದು ಹೆಗ್ಡೆಯವರಿಗೆ ನಾವು ಸ್ಪಷ್ಟ ಮಾತುಗಳಲ್ಲಿ ತಿಳಿಸಲಿಚ್ಛಿಸುತ್ತೇವೆ."

○

"ಅಂತರಿಕ್ಷ ಇಡೀ ಮಾನವ ಸಮೂಜಕ್ಕೆ ಸೇರಿದ್ದು"

(ಒಂದನೇ ಪುಟದಿಂದ)

ಮಾತ್ರವಾದರೆ ಪ್ರಯೋಜನವಿಲ್ಲ ಜಿನೇವಾದಲ್ಲಿ ಆದ ಮಾತುಕತೆಗಳಿಗೆ ವಿರುದ್ಧವಾಗಿ ತಾರಾಸಮರವನ್ನು ತೀವ್ರಗೊಳಿಸಿರುವುದು ಹಿಂದೆ ಈಗಾಗಲೇ ಒಪ್ಪಿಕೊಂಡಿದ್ದ ಅಣ್ವಸ್ತ್ರಗಳನ್ನು ಮಿತಿಗೊಳಿಸುವ ಒಪ್ಪಂದ (ಸಾಲ್ಟ್-2) ವನ್ನು ನಾವು ಇನ್ನು ಮುಂದೆ ಅನುಸರಿಸುವುದಿಲ್ಲವೆಂದು ಘೋಷಿಸಿರುವುದು ಇವು ಜೀನೇವಾ ಮಾತುಕತೆಗೆ ವಿರುದ್ಧವಾದುವು. ಆದುದರಿಂದ ಈ ಬಗ್ಗೆ ಅಮೇರಿಕಾ ವಿಶ್ವ ಜನಾಭಿಪ್ರಾಯಕ್ಕೆ ಶಾಂತಿಯ ಒತ್ತಾಯಕ್ಕೆ ಮಣಿಯದ ಹೊರತು ಏನು ಪ್ರಯೋಜನವಿಲ್ಲ ಎಂದು ಹೇಳುತ್ತಿದೆ.

ಆರು ರಾಷ್ಟ್ರಗಳು ತಮ್ಮ ಈ ಮೆಕ್ಸಿಕೋ ಘೋಷಣೆಯ ಮೂಲಕ "ನಮ್ಮ ಈ ಜಗತ್ತು ಉಳಿಯಬೇಕೆಂದು ಘೋಷಿಸಿರುವುದು ಶಾಂತಿಪ್ರಿಯ ಜನತೆ ಸ್ವಾಗತಿಸುತ್ತಾರೆ. ಆದರೆ ಇದೇ ಘೋಷಣೆಯಲ್ಲಿರುವ ಒಂದು ಅಂಶವನ್ನು ಮರೆಯಬಾರದು. ಈ ಆರು ರಾಷ್ಟ್ರಗಳ ಭೂಮಾಲೀಕ ಬಂಡವಾಳಶಾಹೀ ದ್ವಿಮುಖ ಧೋರಣೆಯ ಪ್ರತಿಬಿಂಬವಾಗಿ ಈ ಪ್ರಮುಖರು ದೆಹಲಿ ಘೋಷಣೆಗೆ ಉತ್ತರ ನೀಡಿ ಸೋವಿಯತ್ ಒಕ್ಕೂಟವನ್ನೂ ಅದರ ವಿರುದ್ಧವಾಗಿ ವರ್ತಿಸಿದ ಅಮೇರಿಕವನ್ನೂ ಒಂದೇ ತಕ್ಕಡಿಯಲ್ಲಿ ತೂಗುವ ಪ್ರಯತ್ನ ಮಾತ್ರ ಬಿಟ್ಟಿಲ್ಲ. ಒಂದೇ ತಕ್ಕಡಿಯಲ್ಲಿ ತೂಗುವುದರಿಂದಲೇ ನಮಗೆ ಪ್ರಯೋಜನ ಎಂದು ಬೇರೆ ಸಾರಿದ್ದಾರೆ.

ಜನವರಿ 15 ರಂದು ಗೊರ್ಬಾಚೆವ್‌ರವರು ಘೋಷಿಸಿದ 2000ದ ವೇಳೆಗೆ ಇಡೀ ವಿಶ್ವ ಅಣು ವಿನಾಶದಿಂದ ಸಂಪೂರ್ಣ ಬಿಡುಗಡೆಯಾಗಬೇಕು ಎಂಬ ಬಗ್ಗೆ ಸ್ವಾಗತದ ಒಂದೇ ಒಂದು ಮಾತಿಲ್ಲ. ಸೋವಿಯತ್ ಒಕ್ಕೂಟ ಒಂದು ವರ್ಷದ ಕಾಲ, ಅಮೇರಿಕಾ ನಾಲ್ಕಾರು ಅಣುಬಾಂಬ್‌ಗಳನ್ನು ಈ ಮಧ್ಯೆ ಸಿಡಿಸಿದರೂ ಕೂಡ ಅಣು ಪರೀಕ್ಷೆ ನಿಲ್ಲಿಸಿದ್ದನ್ನು ಸ್ವಾಗತಿಸುವ ಒಂದೇ ಒಂದು ಮಾತಿಲ್ಲ ಎಂಬುದನ್ನು ಗಮನಿಸಬೇಕು,

'ಕಾಮನ್‌ವೆಲ್ತ್ ನಾಯಕನಲ್ಲ'

(ಒಂದನೇ ಪುಟದಿಂದ)

ಅಪಾರ್ಥಿಡ್ ಎಂಬ ಕರಿಯರನ್ನು ತೊತ್ತಾಗಿ ದುಡಿಸುವ ನೀತಿಯನ್ನು ಬಿಡುವಂತೆ ಒತ್ತಾಯಿಸಬೇಕೆಂದು ತೀರ್ಮಾನಿಸಿದರೆ ಬ್ರಿಟನ್‌ನ ಪ್ರಧಾನಿ ಥ್ಯಾಚರ್‌ರವರು ಅದಕ್ಕೆ ವಿರುದ್ಧವಾಗಿ ನಿಂತು ಎಲ್ಲರ ದೂಷಣೆ, ಕಟುಟೀಕೆಗೆ ಒಳಗಾಗಿದ್ದಾರೆ.

ಕೆಲವೇ ವಾರದ ಹಿಂದೆ ಎಡಿನ್‌ಬರ್ಗ್‌ನಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾ ಕೂಟಕ್ಕೆ ಬ್ರಿಟನ್ ಹಠಮಾರಿತನದ ಕಾರಣಕ್ಕಾಗಿಯೇ 59 ಸದಸ್ಯ ರಾಷ್ಟ್ರಗಳಲ್ಲಿ 31 ರಾಷ್ಟ್ರಗಳು ಬಹಿಷ್ಕರಿಸಿ ತಮ್ಮ ಧೃಢ ನಿರ್ಧಾರವನ್ನು ಪ್ರದರ್ಶಿಸಿದರೂ ಬ್ರಿಟನ್ ಮಣಿಯಲಿಲ್ಲ. ಒಂದೇ ಒಂದು ಕಾರಣ ದ. ಆಫ್ರಿಕದ ಕರಿಯರ ಶ್ರಮ ಪೂರಿತ ದುಡಿತದಿಂದ ಬರುವ ಬ್ರಿಟನ್‌ನ ಲಾಭವನ್ನು ರಕ್ಷಿಸಿಕೊಳ್ಳುವುದು. ಲಾಭವೇ ಮುಖ್ಯವಾಗಿ ಲಕ್ಷಾಂತರ ಕರಿಯರನ್ನು ನರಕಕ್ಕೆ ನೂಕುವ ಬಗ್ಗೆ ಯಾವ ಮಾನವೀಯ ಭಾವನೆಯೂ ಇಲ್ಲದ ಈ ನೀತಿ ಬ್ರಿಟಿಷ್, ಅಮೇರಿಕನ್ ಸಾಮ್ರಾಜ್ಯಶಾಹಿಗಳ ಕರಾಳ ಮುಖವನ್ನು ಜಗತ್ತಿನ ಜನತೆಗೆ ಬಿಚ್ಚಿ ತೋರಿಸಿದೆ, ಕಾಮನ್‌ವೆಲ್ತ್ ಎಂಬ ಕೂಟ, ಹಳೆಯ ಯುಗದ ಪಳೆಯುಳಿಕೆಯ ಅಗತ್ಯವಿಲ್ಲವೆಂಬುದನ್ನು ಇದೂ ಸಾರಿ ತೋರಿದೆ.

ದ. ಕ. ಜಿಲ್ಲಾ ಸಿ. ಐ. ಟಿ ಯು ಸಮಿತಿಯ ಸಭೆ

ತಾ.28-7-1986 ರಂದು ಸೇರಿದ ಜಿಲ್ಲಾ ಸಿ. ಐ. ಟಿ. ಯು ಸಭೆಯ ಪ್ರಾರಂಭದಲ್ಲಿ ವಿಯಾತ್ನಂ ಕಮ್ಯುನಿಸ್ಟ್ ಪಾರ್ಟಿಯ ಪ್ರಧಾನ ಕಾರ್ಯದರ್ಶಿ ಲೇ ಜ್ಯಾನ್ ನಿಧನಕ್ಕೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

ತಾ. 1-8-1986ರಂದು ನಡೆಯುವ ರೈತರ ಚಳುವಳಿ ಬೆಂಬಲ ನೀಡಬೇಕೆಂದು ಇದರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರು ಭಾಗವಹಿಸಿ ಯಶಸ್ವಿಗೊಳಿಸ ಬೇಕೆಂದು ನಿರ್ಣಯಿ---ಯಿತು.

ತಾ 6-8-1986 ರಂದು ಹಿರೋಷಿಮಾ ದಿನವನ್ನು ಜಿಲ್ಲೆಯ ಬೇರೆ ಕೇಂದ್ರದಲ್ಲಿ ಆಚರಿಸ ಬೇಕೆಂದೂ 8-8-86 ರಂದು ನಿರುದ್ಯೋಗಿ ಪ್ರತಿಭಟನಾ ದಿನದ ಅಂಗವಾಗಿ ...ಪುರ ಮತ್ತು ಮಂಗಳೂರಿನಲ್ಲಿರುವ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಆಫೀಸಿನ ಮುಂದೆ ಪ್ರತಿಭಟನೆ ನಡೆಸಿ ಮನವಿ ಅರ್ಪಿಸಲು ನಿರ್ಣಯಿಸಲಾಯಿತು.

ತಾ 9-8-1986 ರಂದು ರಾಷ್ಟ್ರೀಯ ಸಮಗ್ರತಾ ದಿನವನ್ನು ಆಚರಿಸಲು ಮಂಗಳೂರಿನ ಟಿ. ಯು. ಸಮನ್ವಯ ಸಮಿತಿಏರ್ಪಡಿಸಿದ ಸಭೆಯನ್ನು ಯಶಸ್ವಿಗೊಳಿಸಲು ಹಾಗೂ ಜಿಲ್ಲೆಯ ಇತರ ಕೇಂದ್ರಗಳಲ್ಲಿ ಸಭೆ ನಡೆಸಲು ತಿರ್ಮಾನಿಸಲಾಯಿತು.

ಕೆಲಸ ಕಡಿಮೆಯಾದ ಬಗ್ಗೆ ತಾ. 14-8-1986 ರಂದು ಬೀಡಿ ಕಾರ್ಮಿಕರು ಬೀಡಿಮಾಲಿಕರು ಮತ್ತು ಜಿಲ್ಲಾಧಿಕಾರಿಯವರಿಗೆ ಮೆರವಣಿಗೆ ಹೋಗಿ ಮನವಿ ಸಲ್ಲಿಸಲು ಬೀಡಿ ಫೆಡರೇಶನ್ ಕೈಗೊಂಡ ತೀರ್ಮಾನವನ್ನು ಅಂಗೀಕರಿಸಿ ಇದನ್ನು ಯಶಸ್ವಿಮಾಡಲು ಎಲ್ಲಾ ಕಾರ್ಮಿಕರು ಸಹಕರಿಸುವಂತೆ ಕರೆ ನೀಡಲಾಯಿತು.

ರೈತರ ಧರಣಿ

(೩ನೇ ಪುಟದಿಂದ)

ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಿದರು.

ತುಮಕೂರು: 500ಕ್ಕೂ ಹೆಚ್ಚು ಜನ ರೈತರು ಕೃಷಿ ಕಾರ್ಮಿಕರು ತುಮಕೂರು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿ ಜಿಲ್ಲಾಧಿಕಾರಿ ಕಛೇರಿ ಆವರಣವನ್ನು ಸೇರಿ ಕಛೇರಿಯ ಮುಂದೆ ಧರಣಿ ಸತ್ಯಾಗ್ರಹ ಆರಂಭಿಸಿದರು.

ಜಿಲ್ಲಾಧಿಕಾರಿಗಳೇ ಮತಪ್ರದರ್ಶನಕಾರರ ಬಳಿ ಬಂದು ರೈತರ ಮನವಿಯನ್ನು ಸ್ವೀಕರಿಸಿ ರೈತರನ್ನುದ್ದೇಶಿಸಿ ಮಾತನಾಡಿದರು. ಬಗರ್‌ಹುಕುಂ ಸಾಗುವಳಿ ಹಕ್ಕು ಪತ್ರ, ಮನೆ ನಿವೇಶನ ವಿತರಣೆಗಳನ್ನು ಕೋರಿದ 1600 ಅರ್ಜಿಗಳನ್ನೂ ಜಿಲ್ಲಾಧಿಕಾರಿಗಳಿಗೆ ಅರ್ಪಿಸಲಾಯ್ತು.

○

ವಿಚಾರ ಸಂಕಿರಣ

ಗುಲ್ಬರ್ಗ : ದಿ ಐಡಿಯಲ್ ಫೈನ್ ಆರ್ಟ್ ಇನ್‌ಸ್ಟಿಟ್ಯೂಟ್ ನಲ್ಲಿ ಜುಲೈ 25 ರಂದು ಸಂಜೆ ಎಸ್. ಎಫ್. ಐ. ಆಶ್ರಯದಲ್ಲಿ ನೂತನ ಶಿಕ್ಷಣ ನೀತಿ ಕುರಿತು ವಿಚಾರ ಸಂಕೀರಣವನ್ನು ಏರ್ಪಡಿಸಲಾಗಿತ್ತು. ವಿಚಾರ ಸಂಕೀರಣದಲ್ಲಿ ಹೆಸರಾಂತ ಶಿಕ್ಷಣತಜ್ಞರುಗಳಾದ ಡಾ||ಕೃಷ್ಣಂರಾಜುಲು (ಅದ್ಯಾಪಕರು ಗುಲ್ಬರ್ಗ ವಿ ವಿ, ಆರ್ ಕೆ ಹುಡುಗಿ (ಅದ್ಯಾಪಕರು ಪಿಡಿ ಎ ಇಂಜಿನಿಯರಿಂಗ್ ಕಾಲೇಜ್) ಚಿಂತಕ ದಿನ ಪತ್ರಿಕೆ ಸಂಪಾದಕಿಯವರಾದ ಶ್ರೀಮತಿ ಶೀಲಾ ತಿವಾರಿ ಯವರುಗಳು ವಿಚಾರ ಮಂಡಿಸಿ ಮಾತನಾಡಿದರು. ಎಸ್ ಎಫ್ ಐ ನ ಶಾಖೆಯ ಸಂಚಾಲಕರಾದ ಕಾ| ಬಿ ಎಂ ಠಾಕೂರ ಸ್ವಾಗತಿಸಿದರು. 5 ಸಾವಿರ ಕರಪತ್ರಮುದ್ರಿಸಿ ಪ್ರಚಾರ ನಡೆಸಲಾಗಿದೆ, ವಿಚಾರ ಸಂಕೀರಣದಲ್ಲಿ ಸುಮಾರು 400 ಮಂದಿ ಪಾಲ್ಗೊಂಡಿದ್ದರು.

Printed & Published ... Ramachandra Rao on behalf of the Communist Party of India [Marxist] Karnataka State Committe, K. V. Temple Street, Sultanpet, Bangalore-560053 Editorial and manageriel office: L-56, K. V. Temple Street, Sultanpet B-53 Phone : 75331 Editor P. Ramachandra Rao Managing Editor : N. K. Upadhyaya